# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಇತ್ತೀಚೆಗೆ ಬೆಂಗಳೂರಿನ ಆನೇಕಲ್ ಬಳಿ ಸಂಭವಿಸಿದ ಬೆಂಗಳೂರು–ಎರ್ನಾಕುಲಂ ರೈಲು ದುರಂತ ದುರ್ಘಟನೆಯ ಸ್ಥಳಕ್ಕೆ ಕೆಲವೇ ಕ್ಷಣಗಳಲ್ಲಿ ಧಾವಿಸಿದ ಆರೆಸ್ಸೆಸ್ ಸ್ವಯಂಸೇವಕರು ಪರಿಹಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು.


ಸಂಪುಟ : 36 ಸಂಚಿಕೆ : 15 ಜಯ–ಪಾಲ್ಗುಣ ಕಲಿಯುಗಾಬ್ದ 5116 1–3–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ವಿಶ್ವ ಹಿಂದೂ ಪರಿಷತ್ ಸುವರ್ಣ ಸಂಭ್ರಮ

## ಸಾರ್ಥಕ ಅರ್ಧಶತಮಾನದ ಹಿನ್ನೋಟ – ಹಿಂದುತ್ವ ರಕ್ಷಣೆಯ ಭವಿಷ್ಯದ ಭರವಸೆ

ಅರ್ಧಶತಮಾನದ ಹಿಂದೆ ಶ್ರೀ ಕೃಷ್ಣ ಜನ್ಮಾಷ್ಟಮಿಯಂದು (ಕ್ರೋಧಿ ಸಂವತ್ಸರ, ವಿಕ್ರಮ ಶಕೆ 2021, 29 ಆಗಸ್ಟ್ 1964) ಮುಂಬಯಿಯ ಪೊವಾಯಿಯಲ್ಲಿರುವ ಸ್ವಾಮೀ ಚಿನ್ಮಯಾನಂದರ ಆಶ್ರಮ ಸಾಂದೀಪನಿ ಸಾಧನಾಲಯದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಸ್ಥಾಪನೆಯಾಯಿತು. ಅಂದಿನ ಸಮಾಲೋಚನಾ ಸಭೆಯ ಕೊನೆಯಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಭಾರತೀಯ ವಿದ್ಯಾಭವನದ ಸಂಸ್ಥಾಪಕ ಕೆ.ಎಮ್. ಮುನ್ಶಿಯವರು ವಿಹಿಂಪದ ಧ್ಯೇಯೋದ್ದೇಶಗಳನ್ನು ತಿಳಿಸಿದರು:

1. **ಹಿಂದು ಸಮಾಜವನ್ನು ಸಂಘಟಿಸಿ ಶಕ್ತಿಶಾಲಿಗೊಳಿಸುವ ಸಲುವಾಗಿ ಮುಂದಾಳುತನ ವಹಿಸುವುದು**
2. **ಆಧುನಿಕ ಸನ್ನಿವೇಶಗಳಿಗೆ ಸಮ್ಮತವಾಗುವಂತಹ ರೀತಿಯಲ್ಲಿ ಹಿಂದು ಧಾರ್ಮಿಕ ತತ್ತ್ವಜ್ಞಾನವನ್ನು ಮತ್ತು ಆಚರಣೆಗಳನ್ನು ಹಾಗೂ ನೈತಿಕ ಆಧ್ಯಾತ್ಮಿಕ ಸಿದ್ಧಾಂತಗಳನ್ನು ವಿಶ್ವದಾದ್ಯಂತ ಪಸರಿಸುವುದು.**
3. **ವಿದೇಶಗಳಲ್ಲಿ ನೆಲೆಸಿರುವ ಹಿಂದುಗಳೊಂದಿಗೆ ಸಂಪರ್ಕ ಬೆಳೆಸಿ, ಸಂಬಂಧಗಳನ್ನು ದೃಢಗೊಳಿಸುವುದು ಹಾಗೂ ಅವರಿಗೆ ಅಗತ್ಯವೆನಿಸುವ ಸರ್ವವಿಧ ನೆರವು ನೀಡುವುದು.**

ಈ ಮಹೋನ್ನತ ಧ್ಯೇಯದೊಂದಿಗೆ ಕಾರ್ಯಾರಂಭ ಮಾಡಿದ ವಿಶ್ವ ಹಿಂದೂ ಪರಿಷತ್ ಐವತ್ತು ವರ್ಷಗಳ ವಿಕಾಸ ಪಥದಲ್ಲಿ ಹಿಂದೂ ಸಂಘಟನೆ, ಸೇವೆ ಸೇರಿದಂತೆ ವಿವಿಧ ಆಯಾಮಗಳಿಗೆ ತನ್ನ ಶಾಖೆಗಳನ್ನು ವಿಸ್ತರಿಸಿಕೊಂಡು ವಟವೃಕ್ಷವಾಗಿ ಬೆಳೆದು ಸನಾತನ ಭಾರತೀಯ ಪರಂಪರೆಯ ರಕ್ಷಣೆಯಲ್ಲಿ ಮಹತ್ತರವಾದ ಭೂಮಿಕೆಯನ್ನು ನಿರ್ವಹಿಸುತ್ತಿದೆ.

### ಸಮ್ಮೇಳನಗಳು

ವಿಹಿಂಪದ ಅನೇಕ ವಿಧದ ಕಾರ್ಯಕ್ರಮಗಳಲ್ಲಿ ಸಮಗ್ರ ಹಿಂದೂ ಸಮಾಜದ ಎಲ್ಲ ವರ್ಗಗಳನ್ನು, ವಿವಿಧ ಸಂಪ್ರದಾಯಗಳ ಧರ್ಮಾಚಾರ್ಯರು ಮತ್ತು ವಿದ್ವಾಂಸರನ್ನು ಒಟ್ಟಿಗೆ ತರುವ ಸಮ್ಮೇಳನಗಳನ್ನು ನಡೆಸುವುದೂ ಒಂದು. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಬರುವ ಪ್ರಯಾಗದ ಕುಂಭಮೇಳದ ಸಂದರ್ಭದಲ್ಲಿ ವೈಶ್ವಿಕ ಮಟ್ಟದ ಸಮ್ಮೇಳನವನ್ನು ನಡೆಸುವ ನಿರ್ಧಾರವನ್ನು ಸಾಂದೀಪನಿ ಸಾಧನಾಲಯದಲ್ಲಿ ನಡೆದ ಸಭೆಯಲ್ಲಿಯೇ ನಿರ್ಣಯಿಸಲಾಗಿತ್ತು. ಆರಂಭದ ನಂತರ ವಿಶಾಲ ಹಿಂದೂ ಸಮಾಜಕ್ಕೆ ತನ್ನನ್ನು ಪರಿಚಯಿಸುವುದು ಮತ್ತು ಸಮಾಜದಲ್ಲಿ ಹಿಂದುತ್ವದ ಜಾಗೃತಿಯನ್ನುಂಟುಮಾಡುವುದು ವಿಹಿಂಪದ ಪ್ರಧಾನ ಲಕ್ಷ್ಯವಾಗಿತ್ತು. ವಿವಿಧ ಜಾತಿ, ಮತ, ಪಂಥಗಳ ಭಿನ್ನತೆಗಳ ನಡುವೆಯೂ ಹಿಂದೂ ಸಮಾಜ ಸಂಘಟಿತವಾಗಬಲ್ಲದು ಎಂದು ತೋರಿಸುವುದು ಹಾಗೂ ಸರ್ವಸಾಮಾನ್ಯ ಹಿಂದುವಿನಲ್ಲಿ ತಾನು ಒಂಟಿಯಲ್ಲ, ತನ್ನ ಜೊತೆ ಒಂದು ಬೃಹತ್ ಸಂಘಟಿತ ಸಮಾಜ ಶಕ್ತಿಯಿದೆಯೆಂಬ ಅನುಭೂತಿಯಿಂದ ಆತ್ಮವಿಶ್ವಾಸ ಬೆಳೆಸುವುದು ಅನಿವಾರ್ಯವಾಗಿತ್ತು. ಅದರಂತೆಯೇ ದೇಶ ವಿದೇಶಗಳಲ್ಲಿ ಏರ್ಪಡಿಸಿದ ಬೃಹತ್ ಸಮ್ಮೇಳನಗಳು ಹಿಂದೂ ಸಮಾಜದ ಸುಪ್ತ ಚೇತನವನ್ನು ಬಡಿದೆಬ್ಬಿಸಿತು.

1966ರ ಪ್ರಯಾಗ ಕುಂಭಮೇಳ ಹಾಗೂ 1969ರ ಉಡುಪಿಯ ಐತಿಹಾಸಿಕ ಸಮ್ಮೇಳನಗಳು ಈ ದಿಕ್ಕಿನಲ್ಲಿ ಒಂದು ಮಹತ್ತಾದ ಮೈಲಿಗಲ್ಲು. ಒಂದೇ ವೇದಿಕೆಯ ಮೇಲೆ, ಒಂದೇ ಉದ್ದೇಶಕ್ಕಾಗಿ ತಮ್ಮೊಳಗಿನ ತಾರತಮ್ಯಗಳನ್ನು ಬದಿಗಿರಿಸಿ ಸಮಾನ ಎತ್ತರದಲ್ಲಿ ನೂರಾರು ಧರ್ಮಾಚಾರ್ಯರು ಈ ಸಮ್ಮೇಳನದಲ್ಲಿ ಕೂಡಿ ಕುಳಿತಿದ್ದುದು ಹಿಂದು ಇತಿಹಾಸದಲ್ಲೇ ಒಂದು ಅಪೂರ್ವ ವಿಶೇಷತೆ. ಹಿಂದು ಸಮಾಜಕ್ಕೆ 'ನ ಹಿಂದುಃ ಪತಿತೋ ಭವೇತ್' ಎಂಬ ಹೊಸ ದೃಷ್ಟಿಯನ್ನು ನೀಡಿದುದು ಸಹ ಈ ಸಮ್ಮೇಳನದ ಇನ್ನೊಂದು ವಿಶೇಷ.

ತದನಂತರದಲ್ಲಿ ನಡೆದ ದೇಶ ವಿದೇಶಗಳ ಅನೇಕ ಸಮ್ಮೇಳನಗಳು ವಿವಿಧತೆಯಲ್ಲಿ ಏಕತೆ ಸಾಧಿಸುವ ಪಥದತ್ತ ಹಿಂದು ಸಮಾಜವನ್ನು ನಡೆಸುವಲ್ಲಿ ಸಫಲವಾದವು.

### ಉಡುಪಿ ಸಮ್ಮೇಳನದ(1969) ಒಂದು ಸ್ವಾರಸ್ಯ

ಉಡುಪಿ ಆಗ ಒಂದು ಸುಮಾರು 30 ಸಾವಿರ ಜನಸಂಖ್ಯೆಯ ಸಣ್ಣ ನಗರ. ಆದರೆ ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳ ಸಂಖ್ಯೆ ಸುಮಾರು 15 ಸಾವಿರ!. ಸುಮಾರು 6 ಸಾವಿರ ಪ್ರತಿನಿಧಿಗಳಿಗಾಗಿ ಮಾಡಲಾಗಿದ್ದ ಆಹಾರ, ವಸತಿ ಇತ್ಯಾದಿಗಳ ವ್ಯವಸ್ಥೆ ಕುಸಿದು ಬೀಳಬಹುದಾದ ಸ್ಥಿತಿ ಏರ್ಪಟ್ಟಾಗ, ದೂರ ದೂರದ ಸುಮಾರು 2500 ಊರುಗಳಿಂದ ಬಂದಿದ್ದ ಪ್ರತಿನಿಧಿಗಳಿಗೆ ಯಾವುದೇ ಅನನುಕೂಲವಾಗದಂತೆ ಎಲ್ಲ ಸೌಕರ್ಯಗಳನ್ನು ಒದಗಿಸಲು ಸಂಪೂರ್ಣ ಉಡುಪಿ ನಗರ ಒಂದಾಗಿ ಎದ್ದು ನಿಂತಿತು. ಜಾತಿ, ವರ್ಗ, ಸಾಮಾಜಿಕ ಸ್ತರ ಇತ್ಯಾದಿಗಳನ್ನು ಲೆಕ್ಕಿಸದೇ ಅಪರಿಚಿತರೇ ಆಗಿದ್ದ ದೇಶದೆಲ್ಲೆಡೆಯಿಂದ ಆಗಮಿಸಿದ್ದ ಪ್ರತಿನಿಧಿಗಳಿಗೆ ಕಡು ಸಂಪ್ರದಾಯ ನಿಷ್ಠರೂ ಒಳಗೊಂಡಂತೆ ಮನೆ ಮನೆಗಳೂ ಬಾಗಿಲು ತೆರೆದವು. ಶತಮಾನಗಳ ಹಿಂದೆ ಜಾತಿಯ ಕಾರಣಕ್ಕಾಗಿ ಸಂತ ಕನಕದಾಸರಿಗೆ ಮಂದಿರ ಪ್ರವೇಶವನ್ನು ನಿರಾಕರಿಸಿದ್ದ ಉಡುಪಿ ತನ್ನ ಇತಿಹಾಸದಲ್ಲಿ ಹೊಸತೊಂದು ಅಧ್ಯಾಯವನ್ನು ಬರೆಯಿತು. ಸಮ್ಮೇಳನದ ಆರಂಭವೇ ಒಂದು ನೂತನ ಮೌನ ಸಾಮಾಜಿಕ ಕ್ರಾಂತಿಯಾಯಿತು.

### ನಾವು ಹಿಂದುಗಳು – ನಮ್ಮ ಸಂಕಲ್ಪ

- ಮನೆಯಲ್ಲಿ ದೇವರ ಭಾವಚಿತ್ರಕ್ಕೆ ನಮಸ್ಕರಿಸಿ ಕೆಲವು ನಿಮಿಷಗಳ ಕಾಲ ದೇವರ ಧ್ಯಾನ ಮಾಡುತ್ತೇವೆ. ರಾತ್ರಿ ದೇವರ ಮುಂದೆ ದೀಪ ಹಚ್ಚಿರುತ್ತೇವೆ.
- ಎಲ್ಲ ಹಿಂದುಗಳಿಗೆ ನಮ್ಮ ಮನೆಯಲ್ಲಿ ಪ್ರವೇಶವಿದೆ. ನಾವೂ ಎಲ್ಲ ಹಿಂದು ಬಂಧುಗಳ ಮನೆಗೆ ಹೋಗುತ್ತೇವೆ.
- ಮನೆಯ ಸುತ್ತಲಿನ ಪರಸರದಲ್ಲಿ ತುಳಸಿ ಗಿಡವನ್ನು ಬೆಳೆಸುತ್ತೇವೆ.
- ಮನೆಯ ಒಳಗೆ ನಮ್ಮ ಮಾತುಕತೆಗಳು ಮಾತೃಭಾಷೆಯಲ್ಲಿ ನಡೆಯತ್ತವೆ.
- ಪ್ರತಿದಿನವೂ ಒಂದು ಮುಷ್ಟಿ ಅಕ್ಕಿ ಮತ್ತು ಕನಿಷ್ಠ ಒಂದು ರೂಪಾಯಿಯನ್ನು ಯಾವುದಾದರೂ ಸಮಾಜ ಸೇವಾಕಾರ್ಯಕ್ಕಾಗಿ ತೆಗೆದಿಡುತ್ತೇವೆ.
- ಮನೆಯವರೆಲ್ಲ ಸೇರಿ ದೇವಸ್ಥಾನಕ್ಕೆ ಹೋಗುತ್ತೇವೆ.
- ಸದಾ ಭಾರತೀಯ ಉಡುಪಿಗೆ ಆದ್ಯತೆ.
- ನಮ್ಮ ಮನೆಯಲ್ಲಿ ಓಂಕಾರದ ಚಿತ್ರ ಅಥವಾ ಭಾರತಮಾತೆಯ ಚಿತ್ರವು ಪ್ರವೇಶವಾಗುತ್ತಲೇ ಕಾಣುತ್ತದೆ.
- ಅಸ್ಪೃಶ್ಯತೆಯ ಪೀಡೆಯನ್ನು ಪಕ್ಕಕ್ಕಿಟ್ಟು ಎಲ್ಲರನ್ನೂ ಸಮಾನ ಭಾವದಿಂದ ಕಾಣತ್ತೇವೆ

### ಆಂದೋಲನಗಳು ಮತ್ತು ಜನಜಾಗೃತಿ

ಸನಾತನ ಹಿಂದುಧರ್ಮದ ರಕ್ಷಣೆಗೆ ಪಣತೊಟ್ಟಿರುವ ವಿಶ್ವ ಹಿಂದು ಪರಿಷತ್ ಇಂದು ಜನಮನ್ನಣೆಯನ್ನು ಗಳಿಸಿದ್ದರೆ ಅದು ನಡೆಸಿಕೊಂಡು ಬಂದಿರುವ ಜನಾಂದೋಲಗಳೂ ಒಂದು ಕಾರಣ. ಅವುಗಳಲ್ಲಿ ಸರ್ವಪ್ರಥಮವಾಗಿ ಉಲ್ಲೇಖಿಸಬೇಕಾದದ್ದು ಅಯೋಧ್ಯೆಯಲ್ಲಿನ ಶ್ರೀರಾಮಜನ್ಮಭೂಮಿ ಮುಕ್ತಿ ಆಂದೋಲನ. ಶ್ರೀರಾಮಜನ್ಮಭೂಮಿಯ ಮುಕ್ತಿಗಾಗಿ ವಿಹಿಂಪ ನಡೆಸಿದ ಆಂದೋಲನವು ನಾಲ್ಕು ಹಂತಗಳಾದದ್ದು. ಜನಜಾಗೃತಿಯ ಮೊದಲ ಹಂತದಿಂದ ಆರಂಭಗೊಂಡು, ತಾಲಾಖೋಲೋ ಆಂದೋಲನ, ರಾಮಶಿಲಾ–ಶಿಲಾನ್ಯಾಸದವರೆಗೆ ಮೊದಲ್ಗೊಂಡು 1992 ಡಿಸೆಂಬರ್ 6ರಂದು ಎರಡನೇ ಕಾರಸೇವೆಯಲ್ಲಿ ಕಳಂಕಿತ ಕಟ್ಟಡದ ಧ್ವಂಸ ಹಾಗೂ ನಂತರದ ಕಾನೂನು ಹೋರಾಟ ಮತ್ತು ಜನಜಾಗೃತಿಯ ಹಂತದವರೆಗೆ ವಿಹಿಂಪದ ಹೋರಾಟ ಮುಂದುವರೆದಿದೆ.

ಹಾಗೆಯೇ ಕ್ರೈಸ್ತ ಮತಾಂತರದ ದಳ್ಳುರಿಗೆ ಸಿಕ್ಕಿದ್ದ ತಿರುಪತಿಯಲ್ಲಿ ತಿರುಮಲ ತಿರುಪತಿ ಸಂರಕ್ಷಣಾ ಹೋರಾಟ, ಮುಸ್ಲಿಂ ಮತಾಂಧರು ಮತ್ತು ಸೆಕ್ಯುಲರ್ ಸೋಗಲಾಡಿಗಳಿಂದ ಚಿಕ್ಕಮಗಳೂರಿನ ಚಂದ್ರದ್ರೋಣ ಪರ್ವತದ ದತ್ತಪೀಠವನ್ನು ಮುಕ್ತಗೊಳಿಸುವ ಅಭಿಯಾನಗಳಿಗೆ ವಿಹಿಂಪ ನೇತೃತ್ವ ನೀಡಿತು. ಇವಿಷ್ಟೇ ಅಲ್ಲದೇ ತಮಿಳುನಾಡಿನ ರಾಮಸೇತು ರಕ್ಷಣಾ ಆಂದೋಲನ, ಉತ್ತರದ ಗಂಗಾ ಸಂರಕ್ಷಣಾ ಅಭಿಯಾನ, ಜಮ್ಮು ಕಾಶ್ಮೀರದ ಅಮರನಾಥ ಯಾತ್ರಾ ಆಂದೋಲನ, ಸತತವಾಗಿ ನಡೆದುಕೊಂಡು ಬಂದಿರುವ ಗೋರಕ್ಷಾ ಆಂದೋಲನ ಮೊದಲಾದವುಗಳು ವಿಹಿಂಪ ಹೋರಾಟಗಳ ಯಾದಿಯಲ್ಲಿ ಉಲ್ಲೇಖನೀಯವಾದವು.

ಒಂದು ಸಣ್ಣ ತೊರೆಯಂತೆ ಉಗಮವಾದ ವಿಶ್ವ ಹಿಂದು ಪರಿಷತ್ ಐವತ್ತು ವರ್ಷಗಳ ಅವಧಿಯಲ್ಲಿ ಸಂಘಟನೆ ಮತ್ತು ಕಾರ್ಯ ವಿಸ್ತಾರದಿಂದ ತನ್ನ ಹರವನ್ನು ವಿಸ್ತರಿಸಿಕೊಂಡು ಸಾಗರೋಪಾದಿಯಲ್ಲಿ ಬೆಳೆದಿದೆ. ಸನಾತನ ಹಿಂದು ಧರ್ಮ ರಕ್ಷಣೆ ಜಾಗೃತಿಗೆ ಸದಾಸಿದ್ಧವಾಗಿ ಹಿಂದುವಿನ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ಭವಿಷ್ಯದ ಭರವಸೆಯನ್ನೂ ಮೂಡಿಸಿದೆ.

**ವಿಹಿಂಪದ ಕುರಿತು ಹೆಚ್ಚಿನ ಓದಿಗಾಗಿ:**
ವಿಶ್ವ ಹಿಂದು ಪರಿಷದ್ – ವಿಕಾಸ ಪಥದ ಸಿಂಹನೋಟ
ಲೇಖಕರು: ಚಂದ್ರಶೇಖರ ಭಂಡಾರಿ
ಪ್ರಕಾಶಕರು: ವಿಶ್ವ ಹಿಂದು ಪರಿಷತ್, ಕರ್ನಾಟಕ

### ಮೂರು ಸಂಕಲ್ಪಗಳು

**ಡಾ. ಪ್ರವೀಣ ತೊಗಾಡಿಯಾ**
**(ವಿಹಿಂಪದ ಅಂತಾರಾಷ್ಟ್ರೀಯ ಕಾರ್ಯಾಧ್ಯಕ್ಷರು)**
**ಬೆಂಗಳೂರಿನ ಹಿಂದು ಸಮಾಜೋತ್ಸವದಲ್ಲಿ ಹೇಳಿದ್ದು**

ಒಂದು ಕಾಲದಲ್ಲಿ ಅಭಿವೃದ್ಧಿ, ಪ್ರಗತಿ, ಸಂಪತ್ತು, ಜ್ಞಾನ, ಶಕ್ತಿಗಳೆಲ್ಲ ಮೇಳೈಸಿದ್ದ ಹಿಂದೂರಾಷ್ಟ್ರದ ವೈಭವ ಇಂದು ಉಳಿದಿಲ್ಲ. ಉಳಿದಿಲ್ಲವೆಂದರೆ ನಾವು ಉಳಿಸಿಕೊಳ್ಳಲಿಲ್ಲ. ಹಿಂದೂಗಳ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗಿ ಶೇ 80ಕ್ಕಿಂತ ಕೆಳಗೆ ಬಂದು ನಿಂತಿದೆ. 40 ಕೋಟಿ ಹಿಂದುಗಳು ತಿಂಗಳಿಗೆ ಸಂಪಾದಿಸುತ್ತಿರುವುದು ಒಂದು ಸಾವಿರ ರೂ ಮಾತ್ರ. 5 ಕೋಟಿ ಹಿಂದುಗಳು ನಿರುದ್ಯೋಗಿಗಳಾಗಿದ್ದಾರೆ. 4 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂದು ವಿಶ್ವದಲ್ಲಿ ಹಿಂದೂ ಎಲ್ಲಿಯೂ ಸುರಕ್ಷಿತನಾಗಿಲ್ಲ. ಕಡೇಪಕ್ಷ ಭಾರತದಲ್ಲಿಯೂ ಇಲ್ಲ. ಕಾಶ್ಮೀರದಿಂದ ಬಂಗಾಳದವರೆಗೆ ಎಲ್ಲೆಲ್ಲೂ ಹಿಂದು ಅತಂತ್ರನೇ. 100 ಕೋಟಿ ಹಿಂದೂಗಳ ಸಂಪತ್ತು, ಹೊಲ, ಮನೆ–ಮಠ, ಧರ್ಮ, ಹೆಣ್ಣು ಮಕ್ಕಳನ್ನು ರಕ್ಷಿಸಿಕೊಳ್ಳಬೇಕಿದೆ. ರಕ್ಷಣೆಯಿದ್ದರೆ ಸಮೃದ್ಧಿ ತಾನಾಗಿಯೇ ಬರುತ್ತದೆ. ಆತ್ಮಸಮ್ಮಾನವೂ ಉಳಿಯುತ್ತದೆ.

ಆದ್ದರಿಂದ ಮೂರು ಸಂಕಲ್ಪಗಳನ್ನು ಹಿಂದು ಸಮಾಜ ಕೈಗೊಳ್ಳಬೇಕು, ಅವುಗಳನ್ನು ಅರ್ಥೈಸಿಕೊಂಡು ಬಾಳಿನಲ್ಲಿ ಅಳವಡಿಸಿಕೊಳ್ಳಬೇಕು

- **ನಮಗೆ ಮತಾಂತರ ಬೇಡ, ನಮ್ಮ ಧರ್ಮಕ್ಕೆ ಮರಳುವುದು ಬೇಕು.**
- **ಲವ್ ಜಿಹಾದ್ ಬೇಡ, ಸಮಾನ ನಾಗರಿಕ ಸಂಹಿತೆ ಬೇಕು.**
- **ಬಾಂಗ್ಲಾದಿಂದ ಬರುವ ನುಸುಳುಕೋರ ಮುಸಲ್ಮಾನರು ಬೇಡ, ಹಿಂದೂ ಮನೆಗಳಲ್ಲಿ ಹೆಚ್ಚು ಹೆಚ್ಚು ಮಕ್ಕಳಾಗಬೇಕು.**

## ಸಮರ್ಥ ಭಾರತ
ಒಂದು ಗುರಿ - ಹಲವು ದಾರಿ

# ಸಮೂಹ ಮಾಧ್ಯಮ

ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದೇ ಪರಿಗಣಿಸಲಾಗುವ ಮಾಧ್ಯಮಗಳು ಇಂದು ನಮ್ಮ ಸಾಮಾಜಿಕ ಬದುಕನ್ನು ಬಹುವಾಗಿ ಪ್ರಭಾವಿಸಬಲ್ಲವಾಗಿವೆ. ಆದ್ದರಿಂದ ಸಮಾಜದ ಬಗ್ಗೆ ಕಳಕಳಿ ಹೊಂದಿರುವ ಹಾಗೂ ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸುವ ಯಾವುದೇ ಚಟುವಟಿಕೆಯಲ್ಲಿ ಸಮೂಹ ಮಾಧ್ಯಮಗಳ ಬಳಕೆ ಅನಿವಾರ್ಯ. ಮಾಹಿತಿಯನ್ನು ಸುದ್ದಿಯ ರೂಪದಲ್ಲಿ ಜನಮಾನಸಕ್ಕೆ ತಲುಪಿಸುವುದು ಸಮೂಹ ಮಾಧ್ಯಮಗಳ ಮೂಲ ಕಾರ್ಯವಾದರೆ ವಿಷಯಗಳನ್ನು ದಾಖಲಿಸಿ ಇಡುವುದು, ಭಾಷಾ ಕೌಶಲದ ಅಭಿವೃದ್ಧಿ, ಲೋಕಶಿಕ್ಷಣ, ಜ್ಞಾನ ಪ್ರಸರಣ ಮುಂತಾದವುಗಳು ಮಾಧ್ಯಮದೊಟ್ಟಿಗೆ ಬರುವ ಅಂಶಗಳು. ಪ್ರತಿ ವ್ಯಕ್ತಿಯಲ್ಲಿ ಸಾಮಾಜಿಕ ಅರಿವನ್ನು ಮೂಡಿಸುವುದರ ಜೊತೆಗೆ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಲು ಜನರಲ್ಲಿ ಜಾಗೃತಿಯನ್ನೂ ಮೂಡಿಸುವಲ್ಲಿ ಸಮೂಹ ಮಾಧ್ಯಮಗಳು ಪರಿಣಾಮಕಾರಿಯಾದ ಪಾತ್ರನಿರ್ವಹಿಸಬಲ್ಲವು.

ಕೆಲದಶಕಗಳ ಹಿಂದೆ ವೃತ್ತಪತ್ರಿಕೆಗಳು, ರೇಡಿಯೋ ವಾರ್ತೆಗಳಿಗೆ ಮಾತ್ರ ಸೀಮಿತವಾಗಿದ್ದ ಮಾಧ್ಯಮ ಜಗತ್ತು ಇಂದು 24 ಗಂಟೆಗಳ ದೂರದರ್ಶನ ಸುದ್ದಿವಾಹಿನಿಗಳು, ಇಂಟರ್‌ನೆಟ್, ಸಾಮಾಜಿಕ ಜಾಲತಾಣ ಮೊದಲಾದವುಗಳಿಂದಾಗಿ ಅಗಾಧವಾಗಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. ಹಾಗೆಯೇ ಕ್ಷಣಾರ್ಧದಲ್ಲಿ ಯಾವುದೇ ಮಾಹಿತಿ ಜಗತ್ತಿನ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ತಲುಪಬಲ್ಲ ಸೌಲಭ್ಯ ಅದರದೇ ಆದ ದುಷ್ಪರಿಣಾಮವನ್ನೂ ಹೊಂದಿದೆ. ಹಾಗಾಗಿ ರಾಷ್ಟ್ರೀಯ ವಿಚಾರಗಳ ಪ್ರಸರಣ ಮತ್ತು ಸದ್ವಿಚಾರದಲ್ಲಿ ಜನಜಾಗೃತಿ ಮೂಡಿಸುವ ಕಾರ್ಯದಲ್ಲಿ ಸಮೂಹ ಮಾಧ್ಯಮಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಾದುದು ಇಂದಿನ ಕಾಲದ ಆವಶ್ಯಕತೆಯಾಗಿದೆ.

### ನಾವೇನು ಮಾಡಬಹುದು?

- ಮಾಧ್ಯಮಗಳಲ್ಲಿ ಬರುವ ಅಂಕಣಗಳಿಗೆ ಸೂಕ್ತ ಪ್ರತಿಕ್ರಿಯೆ ನಿಡುವುದು. ಮಾಧ್ಯಮ ಸಂಸ್ಥೆಗಳಿಗೆ ಅವರ ಕಾರ್ಯಕ್ರಮಗಳು, ಲೇಖನಗಳ ಕುರಿತು ನಮ್ಮ ಅಭಿಪ್ರಾಯಗಳನ್ನು ತಿಳಿಸುವುದು.
- ಸಂಪಾದಕರಿಗೆ ಪತ್ರ ಬರೆಯುವ ಮೂಲಕ ಅಭಿಪ್ರಾಯಗಳನ್ನು ತಿಳಿಸಬಹುದು. ಉದಾಹರಣೆಗೆ ಪ್ರಸಕ್ತ ವಿದ್ಯಮಾನ, ನಾಗರಿಕ ಸಮಸ್ಯೆಗಳು, ರಾಷ್ಟ್ರೀಯ ಭದ್ರತೆ, ಸರ್ಕಾರದ ಕಾನೂನುಗಳು, ಹಾಗೂ ನಮ್ಮ ಸುತ್ತಮುತ್ತ ನಡೆಯುವ ಒಳ್ಳೆಯ ವಿಚಾರಗಳು.
- ಇಂಟರ್‌ನೆಟ್ ಸುದ್ದಿ ವೆಬ್‌ಸೈಟ್‌ಗಳಲ್ಲಿ ಬರುವ ಲೇಖನಗಳಿಗೆ ಕಾಮೆಂಟ್‌ಗಳ ಮೂಲಕ ನಮ್ಮ ಅಭಿಪ್ರಾಯಗಳನ್ನು ಸೇರಿಸುವುದು.
- ಸ್ಥಳೀಯ ಸುದ್ದಿ ವರದಿಗಾರರು, ಸಾಮಾಜಿಕ ಬದ್ಧತೆಯುಳ್ಳ ಪತ್ರಕರ್ತರೊಂದಿಗೆ ಉತ್ತಮ ಸಂಬಂಧ ಬೆಳೆಸುವುದು. ಅವರಿಗೆ ಆಕರ ಮಾಹಿತಿಗಳನ್ನು ಒದಗಿಸುವುದು.
- ಅಂಕಣಗಳನ್ನು ಬರೆಯವುದು, ಸುದ್ದಿ ವರದಿಗಳನ್ನು ನೀಡುವುದು.
  - ಸಮಕಾಲಿನ ರಾಷ್ಟ್ರೀಯ, ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆಯನ್ನು ನಿಯತ ಕಾಲಿಕೆಗಳಿಗೆ ಮತ್ತು ಪತ್ರಿಕೆಗಳಿಗೆ ಕಳುಹಿಸುವುದು.
  - ಮಾಧ್ಯಮಗಳಲ್ಲಿ ತಪ್ಪು ವರದಿಗಳು ಬಂದಲ್ಲಿ, ಕೀಳು ಅಭಿರುಚಿಯ ಕಾರ್ಯಕ್ರಮಗಳು ಪ್ರಸಾರವಾದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಮುಖ್ಯಸ್ಥರು, ಸಂಪಾದಕರು ಅಥವಾ ಸಂಬಂಧಿಸಿದ ವ್ಯಕ್ತಿಗಳ ಗಮನಕ್ಕೆ ತರುವುದು.
- ಪತ್ರ ಬರಹಗಾರರ ವೇದಿಕೆ ರಚಿಸಿ ಮಾಹಿತಿಯನ್ನು ಹಂಚಿಕೊಳ್ಳುವುದು
- ದೂರದರ್ಶನ ವೀಕ್ಷಕರ ವೇದಿಕೆಯನ್ನು ರಚಿಸಿ ದೂರದರ್ಶನಗಳ ಕಾರ್ಯಕ್ರಮಗಳ ಬಗ್ಗೆ ಅಭಿಪ್ರಾಯಗಳನ್ನು ಪರಸ್ಪರ ಹಂಚಿಕೊಳ್ಳುವುದು.
- ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೆ ಒಮ್ಮೆ ಸಭೆಯನ್ನು ಏರ್ಪಡಿಸಿ ಮಾಧ್ಯಮಗಳಿಗೆ ಸಂಬಂಧಿಸಿದ ವಿಚಾರಗಳನ್ನು ವಿಶ್ಲೇಷಿಸುವುದು.

ಸಂಪರ್ಕ
**ರಾಜೇಶ್ ಪದ್ಮಾರ್**
ವಿಶ್ವ ಸಂವಾದ ಕೇಂದ್ರ ಕರ್ನಾಟಕ,
# 106, 5ನೇ ಮುಖ್ಯರಸ್ತೆ ಚಾಮರಾಜಪೇಟೆ
ಬೆಂಗಳೂರು – 560018. ಫೋನ್: 9880621824
ಇ ಮೇಲ್: rajeshpadmar@gmail.com
ವೆಬ್ ಸೈಟ್: www.samvada.org

# ಸಾಮಾಜಿಕ ಜಾಲತಾಣಗಳು

ಇತ್ತೀಚೆಗೆ ವ್ಯಾಪಕವಾಗಿ ಜನಪ್ರಿಯಗೊಂಡಿರುವ ಸಾಮಾಜಿಕ ಜಾಲತಾಣಗಳು ಅಥವಾ ಸೋಷಿಯಲ್ ಮೀಡಿಯಾ ಕ್ಷಿಪ್ರಗತಿಯಲ್ಲಿ ಮಾಹಿತಿಯ ವಿನಿಮಯಕ್ಕೆ ಇರುವ ಪ್ರಬಲವಾದ ಅಸ್ತ್ರ. ಇದು ಯಾವುದೇ ಪರಿವರ್ತನೆಯನ್ನು ಶುರುಮಾಡಲು ಹಾಗೂ ಅದನ್ನು ಕಾರ್ಯಗತಗೊಳಿಸಲು ಇರುವ ರಹದಾರಿ ಎನ್ನಬಹುದು. ಕಳೆದ ಕೆಲವು ವರ್ಷಗಳಲ್ಲಿ ನಮ್ಮ ದೇಶವೂ ಸೇರಿದಂತೆ ವಿಶ್ವದ ಅನೇಕ ದೇಶಗಳಲ್ಲಿ ನಡೆದ ಆಂದೋಲನಗಳು ಹಾಗೂ ರಾಜಕೀಯ ಪರಿವರ್ತನೆಗಳಲ್ಲಿ ಸಾಮಾಜಿಕ ಜಾಲತಾಣಗಳು ಬಹುಮುಖ್ಯವಾದ ಪಾತ್ರವಹಿಸಿದ್ದನ್ನು ಗಮನಿಸಬಹುದು.

ಇಂದು ದೇಶದ ಮೂಲೆಮೂಲೆಗಳನ್ನು ತಲುಪಿ ಸಾಮಾನ್ಯ ಜನರ ಕೈಗೆಟಕುವ ಬೆಲೆಗೆ ದೊರೆಯುತ್ತಿರುವ ಸ್ಮಾರ್ಟ್‌ಫೋನ್‌ಗಳು ಮತ್ತು ಮೊಬೈಲ್ ಇಂಟರ್ನೆಟ್‌ಗಳ ಸುಲಭ ಸಂಪರ್ಕದಿಂದಾಗಿ ಸಾಮಾಜಿಕ ಜಾಲತಾಣಗಳು ಮಾಧ್ಯಮ ಜಗತ್ತಿನಲ್ಲಿ ಕ್ರಾಂತಿಯನ್ನೇ ಮಾಡಿವೆ. 10,25,00,000 ಫೇಸ್‌ಬುಕ್ ಬಳಕೆದಾರರು ಬಾರತದಲ್ಲಿದ್ದಾರೆ. ಹಾಗೂ ಜಗತ್ತಿನ ಎರಡನೆ ಅತಿದೊಡ್ಡ ಬಳಕೆದಾರರು ಬಾರತೀಯರಾಗಿರುವುದು ವಿಶೇಷ. 3,50,00,000 ಟ್ವಿಟರ್ ಬಳಕೆದಾರರು ಹಾಗೂ ಜಗತ್ತಿನ ಮೂರನೇ ಅತಿದೊಡ್ಡ ಸಂಖ್ಯೆಯಲ್ಲಿ ಬಾರತೀಯರಿರುವುದು ವಿಶೇಷ. 6,25,00,000 ಯೂಟ್ಯೂಬ್ ಬಳಕೆದಾರರು ಭಾರತೀಯರು. ಇನ್ನೊಂದು ಅತಿವೇಗವಾಗಿ ಜನಪ್ರಿಯಗೊಳ್ಳುತ್ತಿರುವ ಸಾಮಾಜಿಕ ಮಾಧ್ಯಮವೆಂದರೆ ವಾಟ್ಸ್‌ಆ್ಯಪ್.

### ಸಾಮಾಜಿಕ ಜಾಲತಾಣದ ಶಕ್ತಿ

- ಮಾಧ್ಯಮಕ್ಕೆ ಸಮಾನಾಂತರವಾಗಿ ಕೆಲಸ ಮಾಡುತ್ತದೆ.
- ಒಮ್ಮೆಲೆ ಅತಿದೊಡ್ಡ ಸಂಖ್ಯೆಯ ಮಂದಿಗೆ ಮಾಹಿತಿ ದೊರೆಯುತ್ತದೆ.
- ಫೋಟೊ, ವೀಡಿಯೊ ಮತ್ತು ಬರವಣಿಗೆಗಳನ್ನು ಅಪ್ ಲೋಡ್ ಮಾಡಬಹುದು.
- ವೆಬ್‌ಸೈಟ್‌ಗಳ ಕೊಂಡಿಯನ್ನು ಸುಲಭವಾಗಿ ಹಂಚಬಹುದು.
- ಪ್ರತಿಕ್ರಿಯೆಗಳನ್ನು ಅಭಿಪ್ರಾಯಗಳಾಗಿ ಪರಿಗಣಿಸಬಹುದು.

### ಪರಿಣಾಮಗಳು

- ಮಧ್ಯಪ್ರಾಚ್ಯ ದೇಶಗಳು, ಮ್ಯಾನ್‌ಮಾರ್, ಹಾಂಗ್‌ಕಾಂಗ್ ಸೇರಿದಂತೆ ವಿಶ್ವದ ಅನೇಕ ಆಂದೋಲನಗಳ ಹಿಂದಿನ ಶಕ್ತಿಯಾಗಿದೆ. 2014ರಲ್ಲಿ ಭಾರತದ ರಾಜಕೀಯ ಮತ್ತು ಆಡಳಿತ ಸ್ಥಿತಿಯನ್ನು ಬದಲಾಯಿಸುವಲ್ಲಿ ಪ್ರಮುಖ ಭೂಮಿಕೆ ವಹಿಸಿದೆ.
- ಇದು ಅಂಕಿಅಂಶಗಳನ್ನು ಹುಡುಕಲು, ಭಾಷಣಗಳ ತುಣುಕುಗಳನ್ನು ಹುಡುಕಲು, ಪತ್ರಿಕಾ ಪ್ರಕಟಣೆ, ಪತ್ರಿಕೆಗಳ ವರದಿಗಳನ್ನು ಪಡೆಯಲು ಸಹಾಯವಾಗುತ್ತದೆ.
- ವಿದ್ಯಾರ್ಥಿಗಳ, ಸಾಮಾಜಿಕ, ರಾಜಕೀಯ, ಆರ್ಥಿಕ, ಹಕ್ಕುಗಳ ಅನೇಕ ಹೋರಾಟಗಳನ್ನು ಜೀವಂತವಾಗಿರಿಸಿವೆ.

### ನಾವೇನು ಮಾಡಬಹುದು?

- ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳ ಕುರಿತು ಸಣ್ಣ ಸಣ್ಣ ಬರಹಗಳನ್ನು ಬರೆದು ಹಂಚಿಕೊಳ್ಳಬಹುದು.
- ರಾಜಕಾರಣ ಮತ್ತು ಮಾಧ್ಯಮಗಳ ಸತ್ಯಾಸತ್ಯತೆ ಹಾಗೂ ಬದ್ಧತೆಗಳನ್ನು ಪ್ರಶ್ನಿಸಬಹುದು. ಉದಾಹರಣೆಗೆ ಯಾವುದೇ 24x7 ಸುದ್ದಿ ಚಾನೆಲ್‌ನದಲ್ಲಿ ತಪ್ಪು ವರದಿ ಬರುತ್ತಿದ್ದರೆ ತಕ್ಷಣ ಪ್ರತಿಕ್ರಿಯೆ ನೀಡಿ ಸಂಬಂಧಿಸಿದವರ ಗಮನಕ್ಕೆ ತರಬಹುದು.
- ಭಾರತದ ಹಿತಾಸಕ್ತಿಗೆ ಸಂಬಂಧಿಸಿದ ವಿಚಾರಗಳನ್ನು ಗಮನಿಸುತ್ತಿರುವುದು. ಉದಾಹರಣೆಗೆ ಜಮ್ಮು ಮತ್ತು ಕಾಶ್ಮೀರ, ಈಶಾನ್ಯದ ಸಮಸ್ಯೆಗಳು, ರಾಷ್ಟ್ರೀಯ ಭದ್ರತೆ, ವಿದೇಶಾಂಗ ವ್ಯವಹಾರಗಳು, ಆರ್ಥಿಕ ನೀತಿ ಮುಂತಾದ ವಿಷಯಗಳ ಬಗ್ಗೆ ಗಮನಿಸುವುದು.
- ಸೇವಾ ಚಟುವಟಿಕೆಗಳಿಗೆ ನಿಧಿಸಂಗ್ರಹ, ಜನಸಂಪರ್ಕ, ಕಾರ್ಯಕ್ರಮಗಳ ಮಾಹಿತಿ ಹಂಚಿಕೊಳ್ಳಲು ಮುಂತಾದ ಸತ್ಕಾರ್ಯಗಳಿಗೆ ಬಳಸಿಕೊಳ್ಳಬಹುದು.
- ಉತ್ತಮ ಸಾಮಾಜಿಕ ಸೇವೆ ಮಾಡುತ್ತಿರುವ ಸಂಘಟನೆಗಳ ಬಗ್ಗೆ ಪ್ರಚಾರ ನೀಡಬಹುದು.
- ನಾಗರಿಕ ಸಮಸ್ಯೆಗಳನ್ನು ಚುನಾಯಿತ ಪ್ರತಿನಿಧಿಗಳ ಹಾಗೂ ಸರ್ಕಾರಿ ಸಂಸ್ಥೆಗಳ ಗಮನಕ್ಕೆ ತರುವುದು.
- ಒಂದೇ ಮನಸ್ಥಿತಿಯ ನಾಗರಿಕರೊಟ್ಟಿಗೆ ಸಂಪರ್ಕ ಸಾಧಿಸಲು, ಒಟ್ಟಿಗೆ ಸೇರಿ ಕೆಲಸ ಮಾಡಲು ಹಾಗು ಸಮಾಜದಲ್ಲಿ ಅರಿವು ಮೂಡಿಸುವ ಕಾರ್ಯದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.
- ವೈಯಕ್ತಿಕ ಮಟ್ಟದಲ್ಲಿ ಹೊಸ ವಿಚಾರಗಳನ್ನು ಪ್ರಕಟಿಸಬಹುದು, ಹಂಚಬಹುದು, ತಿಳಿಯಬಹುದು.

ಸಂಪರ್ಕ
ಹೆಚ್ಚಿನ ಮಾಹಿತಿಗಾಗಿ ಟ್ವಿಟ್ಟರ್ ನಲ್ಲಿ ಸಂಪರ್ಕಿಸಿ:
**ಕಿರಣ್‌ಕುಮಾರ್ ಎಸ್** (@kiranks)
**ಪ್ರಶಾಂತ್ ವೈದ್ಯರಾಜ್** (@pvaidyaraj)
: https://www.facebook.com/swayamsevaks
: @rssorg@samvada

# ಅಸ್ಪೃಶ್ಯತೆ ಮುಕ್ತ ಸಮಾಜ ನಿರ್ಮಿಸೋಣ

**ವಿಶ್ವ ಹಿಂದು ಪರಿಷತ್‌ನ ಸುವರ್ಣ ಮಹೋತ್ಸವದ ಅಂಗವಾಗಿ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬೃಹತ್ ಹಿಂದೂ ಸಮಾಜೋತ್ಸವ ಕಾರ್ಯಕ್ರಮ ಫೆಬ್ರವರಿ 8, 2015ರಂದು ನಡೆಯಿತು. ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಹಿಂದೂ ಸಮಾಜಕ್ಕೆ ಮಾರ್ಗದರ್ಶನ ಮಾಡಿದ ಸ್ವಾಮೀಜಿಗಳ ಭಾಷಣದ ಸಾರಾಂಶ.**




"ಗೋ ಹತ್ಯೆಯ ವಿಚಾರವಾಗಿ ದಲಿತ ಸಮುದಾಯದ ದೃಷ್ಟಿಕೋನದ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡುವಾಗ, ಕೆಲವು ಸೂಕ್ಷ್ಮಗಳನ್ನು ನಾವು ಅರಿಯಬೇಕಿದೆ. ಗೋ ರಕ್ಷಣೆಯ ಬಗ್ಗೆ ಹೆಚ್ಚಿನ ದಲಿತ ಸಮುದಾಯಕ್ಕೆ ಅರಿವಿಲ್ಲದಿರುವುದಕ್ಕೆ ಶತ-ಶತಮಾನಗಳ ಕಾಲ ನಡೆಸಿಕೊಂಡು ಬಂದಿರುವ ಜೀವನ ಶೈಲಿಯೆ ಕಾರಣ, ಅರಣ್ಯವಾಸಿಗಳಾಗಿದ್ದರಿಂದಾಗಿ ಸಾಂಪ್ರದಾಯಿಕ ಶೈಲಿಯಲ್ಲಿ ಜಾನುವಾರು ಸಾಕಾಣಿಕೆ ಮಾಡುವ ಅವಕಾಶವಿರಲಿಲ್ಲ. ಒರಿಸ್ಸಾದಲ್ಲಿ ದಲಿತರಿಗೆ ಗೋ ಸಾಕಣೆ ಮತ್ತು ಸಂರಕ್ಷಣೆಯ ಮಹತ್ವವನ್ನು ತಿಳಿಸಿಕೊಡುವ ಕೆಲಸವನ್ನು ಮಾಡುವಂತೆ ಆರೆಸ್ಸೆಸ್ಸಿನ ಆಗಿನ ಮುಖಂಡ ಶ್ರೀಗುರೂಜಿಯವರು ಪುರಿ ಶ್ರೀ ಶಂಕರಾಚಾರ್ಯರಿಗೆ ಮನವರಿಕೆ ಮಾಡಿಸಿದ್ದರು. ಘರ್‌ವಾಪಸಿಯಲ್ಲಿ ಹಿಂದುಗಳಾಗಿ ಮರುಮತಾಂತರವಾಗುವ ದಲಿತರನ್ನು ಯಾವ ಜಾತಿಗೆ ಸೇರಿಸಲಾಗುತ್ತದೆಂದು ರಾಜಕಾರಣಿಗಳು ಪ್ರಶ್ನಿಸುತ್ತಾರೆ. ಆದರೆ ಕೊಟ್ಟ ವಸ್ತುವನ್ನು ವಾಪಸು ಪಡೆದುಕೊಂಡ ರೀತಿಯಲ್ಲಿ ಅವರನ್ನು ಸಮಾನವಾಗಿ ನಡೆಸಿಕೊಳ್ಳಬೇಕು."

**– ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಜೀ**



"ಸಮಗ್ರ ಭಾರತದ ಕಲ್ಪನೆ ಮೂಡಿದ ನಂತರದಲ್ಲಿ ದೇವಸ್ಥಾನ, ಗುರುಪೀಠಗಳಲ್ಲಿ ಸಂಘಟನೆಯಿರಲಿಲ್ಲ. ನಮ್ಮ ಪ್ರಾಂತ್ಯ, ಸಾಮಾಜಿಕ, ಧಾರ್ಮಿಕ ನಂಬಿಕೆಗಳಂತೆ ನಾವು ನಡೆದುಕೊಳ್ಳುತ್ತಿದ್ದೆವು. ಈಗಿನಂತೆ ಆಗ ಪರಸ್ಪರ ಸಂಪರ್ಕ ಸಾಧನಗಳು ಇರಲಿಲ್ಲ. ಹಾಗಾಗಿ ಪ್ರತ್ಯೇಕತೆಯೇ ಸಂಪತ್ತು ಎಂದು ಬೆಳೆದೆವು. ಆದರೆ ವಿಶ್ವ ಹಿಂದು ಪರಿಷತ್‌ನ ಪ್ರಯತ್ನದಿಂದಾಗಿ ಇಂದು ಸಂಕುಚಿತ ಮನೋಭಾವ ಮೀರಿ ಬೆಳೆಯಲು ಸಾಧ್ಯವಾಗಿದೆ."

**– ಶ್ರೀ ಡಿ. ವೀರೇಂದ್ರ ಹೆಗ್ಗಡೆ,**
**ಧರ್ಮಸ್ಥಳದ ಧರ್ಮಾಧಿಕಾರಿ**



"ಮತಾಂತರಕ್ಕೆ ಕೇವಲ ಬೇರೆ ಧರ್ಮಗಳು ಕಾರಣವಲ್ಲ, ನಮ್ಮಲ್ಲಿರುವ ಅಸ್ಪೃಶ್ಯತೆಯಂತಹ ಪಿಡುಗುಗಳೂ ಕಾರಣವಾಗಿವೆ. ನಾವೂ ನಮ್ಮವರೇ, ಬೇರೆ ಧರ್ಮದವರನ್ನೂ ಸಹ ಸಮಾನರಾಗಿ ಕಾಣುವ ನಾವು ನಮ್ಮ ಧರ್ಮಕ್ಕೇ ಸೇರಿದ ಕೆಲವು ಪಂಗಡದವರನ್ನು ಅಸ್ಪೃಶ್ಯರಂತೆ ಕಾಣುತ್ತೇವೆ. ಇದು ಸಮ್ಮತವಲ್ಲ, ಹಿಂದುಗಳೆಲ್ಲಾ ಸಮಾನರು. ಜಾತ್ಯತೀತವಾದಿಗಳೆಂದು ಹೇಳಿಕೊಳ್ಳುವ ರಾಜಕಾರಣಿಗಳು ಬಲತ್ಕಾರದಿಂದ, ಆಸೆ-ಆಮಿಷಗಳಿಂದಾಗುತ್ತಿರುವ ಮತಾಂತರವನ್ನು ತಡೆಗಟ್ಟಲು ಮತಾಂತರ ನಿಷೇಧ ಕಾಯ್ದೆ ತರಲು ತಯಾರಿಲ್ಲ. ಆದರೆ ಮರು ಮತಾಂತರ ಎಂಬ ಪದ ಕೇಳುತ್ತಲೇ ಆಕಾಶವೇ ಕಳಚಿ ತಲೆ ಮೇಲೆ ಬಿದ್ದ ಹಾಗೆ ಆಡುತ್ತಾರೆ. ಮತಾಂತರಕ್ಕೆ ಅವಕಾಶವಿದ್ದ ಮೇಲೆ ಮರುಮತಾಂತರಕ್ಕೂ ಅವಕಾಶವಿರಬೇಕು. ಇದನ್ನು ಒಪ್ಪದ ಅವರು ಅಲ್ಪಸಂಖ್ಯಾತ ಧರ್ಮಕ್ಕೆ ಒಂದು, ಹಿಂದು ಧರ್ಮಕ್ಕೆ ಮತ್ತೊಂದು ಕಾನೂನು ಅನುಸರಿಸುತ್ತಾರೆ. ಈ ಬಗ್ಗೆ ಸಾಕಷ್ಟು ಬಾರಿ ಪ್ರಶ್ನಿಸಿದ್ದರೂ ಅವರಿಂದ ಸೂಕ್ತ ಉತ್ತರ ಬಂದಿಲ್ಲ."

**– ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮಿಜೀ**

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನಭಾಗ್, ಜಿ.ಆರ್. ಸಂತೋಷ್, ಮಹೇಶ್ ಎಸ್, ಶ್ರೀವತ್ಸ, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

## ಸಾಲುದ್ದದ ಸುದ್ದಿಗಳು



- **ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿರುವ ನೇಪಾಳ ಮತ್ತು ಭೂತಾನ್ ಗಡಿಯಲ್ಲಿ ಶಸ್ತ್ರಾಸ್ತ್ರಧಾರಿ ಸೈನಿಕರ ಬದಲಾಗಿ ಹಸನ್ಮುಖಿ ಸೈನಿಕರ ನಿಯೋಜನೆಗೆ ಸಶಸ್ತ್ರ ಸೀಮಾಬಲ (ಎಸ್‌ಎಸ್‌ಬಿ) ನಿರ್ಧರಿಸಿದೆ. ಇವರು ಭಾರತದ ಗಡಿಯೊಳಗೆ ಬರುವ ವ್ಯಕ್ತಿಗಳೊಂದಿಗೆ ನಗುನಗುತ್ತಾ ಸಂವಾದ, ತಪಾಸಣೆ ನಡೆಸಲಿದ್ದಾರೆ. ಎರಡೂ ದೇಶಗಳು ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿದ್ದು, ವ್ಯಾಪಾರದ ಉದ್ದೇಶಗಳಿಗಾಗಿ ಅಲ್ಲಿನ ಜನರು ಆಗಾಗ ಭಾರತಕ್ಕೆ ಬಂದು ಹೋಗುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಎಸ್‌ಎಸ್‌ಬಿ ಸಶಸ್ತ್ರ ಯೋಧರ ಬದಲು ಸಂವಾದಿಗಳ ತಂಡಗಳನ್ನು ನಿಯೋಜಿಸಿದೆ. ಆರಂಭಿಕ ಹಂತದಲ್ಲಿ 100 ಸಿಬ್ಬಂದಿಗಳನ್ನು 8 ಕಡೆಗಳಲ್ಲಿ ನಿಯೋಜಿಸಲಾಗಿದ್ದು ಯಶಸ್ವಿಯಾದರೆ 1751 ಕಿ.ಮೀ. ಉದ್ದದ ನೇಪಾಳ ಹಾಗೂ 699 ಕಿ.ಮೀ. ಉದ್ದದ ಭೂತಾನ್ ಗಡಿಯಲ್ಲಿ ಈ ಹಸನ್ಮುಖಿ ಸೈನಿಕರ ನಿಯೋಜನೆಗೆ ಎಸ್‌ಎಸ್‌ಬಿ ಮುಂದಾಗಿದೆ. ಇವರಿಂದ ಸ್ವಲ್ಪ ದೂರದಲ್ಲಿ ಶಸ್ತ್ರಾಸ್ತ್ರಧಾರಿ ಸೈನಿಕರೂ ಇರಲಿದ್ದಾರೆ.**

- ಕರ್ನಾಟಕದಲ್ಲಿ 305 ಅಕ್ರಮ ವಲಸಿಗ ಬಾಂಗ್ಲಾದೇಶೀಯರು ಪತ್ತೆಯಾಗಿದ್ದಾರೆ ಹಾಗೂ ಅಕ್ರಮ ನುಸುಳುಕೋರರರನ್ನು ಗಡಿಪಾರು ಮಾಡಲು ಅಗತ್ಯ ಕ್ರಮವನ್ನು ತಗೆದುಕೊಳ್ಳಲಾಗುತ್ತಿದೆ ಎಂದು ರಾಜ್ಯ ಸರಕಾರ ತಿಳಿಸಿದೆ. ಈ ಪೈಕಿ 257 ಮಂದಿ ಬೆಂಗಳೂರಿನಲ್ಲಿ ನೆಲೆಸಿದ್ದು, ಉಳಿದಂತೆ ಮೈಸೂರು (16), ಉಡುಪಿ (14), ರಾಮನಗರ (13), ಮಂಗಳೂರು ನಗರ (4) ಮತ್ತು ವಿಜಯಪುರ (1) ಪತ್ತೆಯಾಗಿದ್ದಾರೆ ಎಂದು ತಿಳಿಸಿದೆ. ಈ ಪೈಕಿ 240 ಮಂದಿಯನ್ನು ಪಾಸ್‌ಪೋರ್ಟ್ ಮತ್ತು ವೀಸಾ ಇಲ್ಲದೆ ಅನಧಿಕೃತವಾಗಿ ವಾಸಕ್ಕಾಗಿ ಬಂಧಿಸಲಾಗಿದೆ ಎಂದಿದೆ.



- **ಸಿಕ್ಕಿಂನ ನಾಥುಲಾ ಪಾಸ್ ಮಾರ್ಗವಾಗಿ ಕೈಲಾಸ ಮಾನಸ ಸರೋವರಕ್ಕೆ ಜೂನ್ 18ರಿಂದ ಹೊಸ ಮಾರ್ಗ ತೆರೆಯಲಾಗುವುದು ಎಂದು ಕೇಂದ್ರ ವಿದೇಶಾಂಗ ವ್ಯವಹಾರ ಸಚಿವೆ ಸುಷ್ಮಾ ಸ್ವರಾಜ್ ಪ್ರಕಟಿಸಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಭಾರತಕ್ಕೆ ಭೇಟಿ ನೀಡಿದ್ದಾಗ ಕೈಲಾಸ ಮಾನಸ ಸರೋವರ ಯಾತ್ರೆಗೆ ಪರ್ಯಾಯ ಮಾರ್ಗ ತೆರೆಯಲು ಒಪ್ಪಂದ ಮಾಡಿಕೊಳ್ಳಲಾಗಿತ್ತು.**





- ಯಾವುದೇ ವೈದ್ಯಕೀಯ ಪ್ರಯೋಗವೂ ಇಲ್ಲದೆ, ಸಮರ್ಪಕ ಅಗತ್ಯ ನೀತಿನಿಯಮಗಳನ್ನು ಅನುಸರಿಸದ ಕೆಲವು ಔಷಧಿಗಳು ಮಾರುಕಟ್ಟೆಗೆ ಬರಲು ಭಾರತದಲ್ಲಿ ಅವಕಾಶ ಮಾಡಿಕೊಡಲಾಗಿದೆ ಎಂಬ ಆಘಾತಕಾರಿ ಅಂಶವನ್ನು ಜಗದ್ವಿಖ್ಯಾತ ವೈದ್ಯಕೀಯ ವಾರಪತ್ರಿಕೆ 'ದಿ ಲ್ಯಾನ್ಸೆಟ್' ನಡೆಸಿದ ಅಧ್ಯಯನದಿಂದ ಬೆಳಕಿಗೆ ಬಂದಿದೆ.ನಿರ್ದಿಷ್ಟ ರಾಸಾಯನಿಕಗಳನ್ನು ನಿಗದಿತ ಪ್ರಮಾಣದಲ್ಲಿ ಮಿಶ್ರಣಮಾಡಿ ಔಷಧ ತಯಾರಿಸಿರುವ 41 ಬಗೆಯ 'ಸ್ಥಿರ ಪ್ರಮಾಣ ಸಂಯೋಜನೆಗಳ' ಒಳಗೆ ಮೆಟ್ ಫಾರ್ಮಿನ್ ಎಂಬ ರಾಸಾಯನಿಕವು ಅಪಾಯಕಾರಿಮಟ್ಟದಲ್ಲಿ ಬಳಕೆಯಾಗಿದ್ದರೂ ಭಾರತೀಯ ಔಷಧ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಅನುಮೋದನೆ ನೀಡಿದೆ. ಮಧುಮೇಹ ನಿಯಂತ್ರಣಕ್ಕಾಗಿ ಈ ಸಂಯೋಜನೆಯನ್ನು ಬಳಸಿಕೊಂಡು ತಯಾರಾಗಿರುವ ಸುಮಾರು 500 ಬ್ರ್ಯಾಂಡ್ ಔಷಧಿಗಳು ಈಗಾಗಲೇ ಮಾರುಕಟ್ಟೆಯಲ್ಲಿವೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಚಿಕಿತ್ಸಕ ಮಾರ್ಗಸೂಚಿಗಳು ಮಧುಮೇಹ ನಿಯಂತ್ರಣಕ್ಕೆ ಮೆಟ್‌ಫಾರ್ಮಿನ್ ಬಳಕೆಯನ್ನು ಶಿಫಾರಸ್ಸು ಮಾಡುವುದಿಲ್ಲ. ಆದರೂ ಈ ಔಷಧಗಳ ಮಾರಾಟ ಪ್ರಮಾಣ ಶೇ. 56ರಷ್ಟಿದೆ.



- ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ಜನವರಿ ತಿಂಗಳೊಂದರಲ್ಲೆ ಕೇಂದ್ರ ಸರ್ಕಾರ 7.1 ಲಕ್ಷ ಶೌಚಾಲಯಗಳನ್ನು ನಿರ್ಮಿಸಿದೆ. ಏಪ್ರಿಲ್ 2014 ರಿಂದ ಜನವರಿ 2015ರವರೆಗೆ 34.83 ಲಕ್ಷ ಶೌಚಾಲಯಗಳ ನಿರ್ಮಾಣವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

- ಭಾರತ ಮೂಲದ, ಹಾಂಕಾಂಗ್ ನಿವಾಸಿಯಾಗಿರುವ 29 ವರ್ಷದ ಯೋಗ ಶಿಕ್ಷಕ ಯೋಗರಾಜ್ ಸಿ.ಪಿ ಸತತವಾಗಿ 40 ಗಂಟೆಗಳ ಕಾಲ ಯೋಗಾಸನ ಮಾಡುವ ಮೂಲಕ ಗಿನ್ನೆಸ್ ದಾಖಲೆ ಸೃಷ್ಟಿಸಿದ್ದಾರೆ. ಈ ಮೂರು ದಿನಗಳ ಅವಧಿಯಲ್ಲಿ 1500ಕ್ಕೂ ಹೆಚ್ಚು ಆಸನಗಳನ್ನು ಪ್ರದರ್ಶಿಸಿ ಹೊಸ ದಾಖಲೆ ಬರೆದ ಯೋಗರಾಜ್‌ರವರನ್ನು ಪ್ರಧಾನಿ ನರೇಂದ್ರ ಮೋದಿ ಟ್ವಿಟರ್ ಮೂಲಕ ಅಭಿನಂದಿಸಿದರು.

- ವಾರಸುದಾರ ರಹಿತ ಹಸುಗಳನ್ನು ಕಾಪಾಡಲು ಹರಿಯಾಣ ಸರ್ಕಾರ ಗೋ ಅಭಯಾರಣ್ಯ ನಿರ್ಮಿಸಲು ಮುಂದಾಗಿದೆ. ಹರಿಯಾಣದಲ್ಲಿ ಸುಮಾರು 1.5ಲಕ್ಷ ಬೀದಿದನಗಳಿದ್ದು, ಇವುಗಳನ್ನು ಸಂರಕ್ಷಿಸುವ ಉದ್ದೇಶದಿಂದ ಈ ಯೋಜನೆ ಕೈಗೊಳ್ಳಲಾಗಿದೆ ಎಂದು ಹರಿಯಾಣ ಸರ್ಕಾರ ತಿಳಿಸಿದೆ. ಗೋಹತ್ಯೆಗೆ ನಿರ್ಬಂಧ ಹೇರುವ 'ಗೋ ಸಂವರ್ಧನ' ವಿಧೇಯಕವನ್ನೂ ಸರ್ಕಾರ ರಚಿಸಿದ್ದು, ಮುಂದಿನ ಅಧಿವೇಶನದಲ್ಲಿ ಮಂಡಿಸುವುದಾಗಿ ತಿಳಿಸಿದೆ. ದೇಶಿತಳಿಯ ಹಸುಗಳ ಖರೀದಿ ಹಾಗೂ ಡೈರಿ ಸ್ಥಾಪಿಸಲು ಶೇ. 50ರಷ್ಟು ಸಬ್ಸಿಡಿ ನೀಡಲು ಹರಿಯಾಣ ಸರ್ಕಾರ ನಿರ್ಧರಿಸಿದೆ.




- ಪರೀಕ್ಷೆಯನ್ನು ಹೊರೆಯಾಗಿ ಪರಿಗಣಿಸದೇ ಅದೊಂದು ಸಾಮರ್ಥ್ಯ ತಿಳಿದುಕೊಳ್ಳುವ ಅವಕಾಶ ಎಂದು ಅರಿತು ಸದುಪಯೋಗಪಡಿಸಿಕೊಳ್ಳಿ, ಒತ್ತಡಕ್ಕೆ ಒಳಗಾಗದೇ ಧೈರ್ಯವಾಗಿ ಪರೀಕ್ಷೆಯನ್ನು ಎದುರಿಸಿ, ಆಸಕ್ತಿ ವಿಷಯದಲ್ಲಿ ಪರಿಣತಿ ಸಾಧಿಸಲು ಯತ್ನಿಸಿ, ನಿಮ್ಮೊಳಗಿನ ಜ್ಞಾನದ ಮೇಲೆ ನಂಬಿಕೆ ಇಡಿ, ಕೆಟ್ಟ ಫಲಿತಾಂಶ ಬಂದಾಗ ಕಂಗಾಲಾಗದೇ ಮತ್ತೆ ಯತ್ನಿಸಿ, ಪರೀಕ್ಷೆಯನ್ನು ಹಬ್ಬದ ರೀತಿಯಲ್ಲಿ ಕಾಣಿರಿ... ಎಂದು ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಪ್ರತಿ ತಿಂಗಳು ದೇಶದ ಜನಸಾಮಾನ್ಯರೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳು ಪ್ರಧಾನಿ ಮೋದಿ ಆಕಾಶವಾಣಿಯಲ್ಲಿ ನಡೆಸಿಕೊಡುವ 'ಮನ್ ಕೀ ಬಾತ್' ಕಾರ್ಯಕ್ರಮದ ಅಂಗವಾಗಿ ಈ ಬಾರಿ ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿ ಕುರಿತು ಮಾತನಾಡಿ ಸ್ಫೂರ್ತಿ ತುಂಬಿದರು. ಪ್ರಧಾನಿ ನರೇಂದ್ರ ಮೋದಿ ಅವರ 'ಮನ್ ಕೀ ಬಾತ್' ಕಾರ್ಯಕ್ರಮದಿಂದಾಗಿ ಆಕಾಶವಾಣಿಗೆ (ಆಲ್ ಇಂಡಿಯಾ ರೇಡಿಯೋ - AIR) ಗೆ ಭಾರಿ ಜಾಹಿರಾತುಗಳು ದೊರೆಯುತ್ತಿವೆ ಎಂದು ಅದು ತಿಳಿಸಿದೆ. ಫೆಬ್ರವರಿ 23ರಂದು ನಡೆದ ಕಾರ್ಯಕ್ರಮಕ್ಕೆ ಸುಮಾರು 25 ಲಕ್ಷ ರೂ. ಮೊತ್ತದ ಜಾಹಿರಾತು ಹರಿದುಬಂದಿದೆ ಎಂದು ಎಐಆರ್ ತಿಳಿಸಿದೆ.

# ಕುರಿ ಕಾಯುವ ಮಹಿಳೆಯನ್ನು ಅರಸಿ ಬಂದ ಪದ್ಮಶ್ರೀ!



ಅದು ಛತ್ತೀಸ್‌ಗಢದ ರಾಜಾನಂದ ಗಾವ ಜಿಲ್ಲೆಯ ಘುರಿಯಾ ಎಂಬ ಪುಟ್ಟ ಗಾಮ. ಹಸಿವು ನಿರುದ್ಯೋಗ, ಬಳಲಿಕೆ ಇಷ್ಟೇ ಆ ಊರಲ್ಲಿರುವ ಸಂಪತ್ತು! ಝುಡಿರಾಮ್ ಯಾದವ್, ಸುಮಿತ್ರಾಬಾಯಿ ದಂಪತಿಯ ಮಗಳಾಗಿ 1969ರಲ್ಲಿ ಜನಿಸಿದ ಫುಲಬಾಸನ್‌ಗೆ ಭೌತಿಕ ಹಸಿವಿನ ಜತೆ ಹೆಚ್ಚಾಗಿ ಕಾಡುತ್ತಿದ್ದುದು ಅಕ್ಷರದ ಹಸಿವು! ತಾನು ಅಕ್ಷರ ಕಲಿಯಬೇಕು ಎಂಬ ಸಣ್ಣ ಆಸೆ. ಆದರೆ 10ನೇ ವಯಸ್ಸಿನಲ್ಲಿಯೇ ಮದುವೆ ಮಾಡಿಕೊಡಲಾಯಿತು! ರಾಜಾನಂದಗಾಂವ್‌ನಿಂದ 8 ಕಿ.ಮೀ. ಅಂತರದಲ್ಲಿರುವ ಸೂಕುಲದೈಹಾನ್ ಎಂಬ ಕುಗ್ರಾಮದಲ್ಲಿ ಗಂಡನ ಮನೆ. ಅನಕ್ಷರಸ್ಥನಾದ ಈತನಿಗೆ ಸ್ವಂತ ಕೃಷಿ ಜಮೀನೂ ಇರಲಿಲ್ಲ. ಊರವರ ಕುರಿ, ದನಗಳನ್ನು ಮೇಯಿಸುವುದು, ಅದಕ್ಕೆ ಕೂಲಿ ಪಡೆದು ದಿನದೂಡುವುದಷ್ಟೇ ಅವನಿಗೆ ಗೊತ್ತಿತ್ತು. 10ನೇ ವಯಸ್ಸಿಗೆ ಗಂಡನ ಮನೆಗೆ ಬಂದ ಫುಲಬಾಸನ್, ಈ ಎಲ್ಲ ಕೆಲಸಗಳನ್ನೂ ಮಾಡಬೇಕಾಯಿತು. ಮನೆಯಲ್ಲಿ ಅಡುಗೆ ಮಾಡಿಟ್ಟು ದಿನವಿಡಿ ಕುರಿ, ದನಗಳನ್ನು ಮೇಯಿಸುವುದು, ಕೃಷಿಕೂಲಿಗೆ ಹೋಗುವುದು ದಿನಚರಿಯಾಯಿತು. ಇದರ ಮಧ್ಯೆಯೇ ಗಂಡನ ಕಣ್ಣುತಪ್ಪಿಸಿ ಆಗಾಗ ಶಾಲಾ ತರಗತಿಯೊಳಗೆ ಹೋಗಿ ಕೂರುತ್ತಿದ್ದ ಈಕೆ ಹೇಗೋ ನಾಲ್ಕನೇ ತರಗತಿ ಪಾಸು ಮಾಡಿಬಿಟ್ಟಳು.

ಬಾಸನ್ ನಾಲ್ಕು ಮಕ್ಕಳ ತಾಯಿಯಾದಾಗ ಅನ್ನದ ಕಣಕಣಕ್ಕೂ ಅಕ್ಷರಶಃ ನಿತ್ಯಹೋರಾಟ. ಪುಟ್ಟ ಮಕ್ಕಳು ಆಹಾರಕ್ಕಾಗಿ ಜಗಳವಾಡುವಾಗ ಒಲೆಯ ಹೊಗೆಯ ಘಾಟಿನಲ್ಲಿ ಬಾಸನ್ ಬಿಕ್ಕಿಬಿಕ್ಕಿ ಅಳುತ್ತಿದ್ದರು. ಬಡತನ, ಸಂಕಷ್ಟ. ಕಣ್ಣೀರಿನೊಂದಿಗೆ 20 ವರ್ಷಗಳ ಸಂಘರ್ಷ. ಈ ಅವಧಿಯಲ್ಲಿ ಉಪವಾಸವಿದ್ದ ದಿನಗಳಿಗೆ ಲೆಕ್ಕವಿಲ್ಲ. ಗಂಡನಿಂದ ತಿಂದ ಹೊಡೆತಗಳಿಗೆ ಲೆಕ್ಕವಿಲ್ಲ. ಮ್ಕಕಳನ್ನು ಅಪ್ಪಿಕೊಂಡು ಅದೆಷ್ಟು ಬಾರಿ ಬಿಕ್ಕುತ್ತಾ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದಿದ್ದಾಳೋ ಆಕೆಗೇ ಗೊತ್ತು.

ಅದೇನೋ 2001ರಲ್ಲಿ ಆಕೆ ಬಡತನದ ಬವಣೆ, ಕೌಟುಂಬಿಕ ದೌರ್ಜನ್ಯ, ಹೆಣ್ಣುಮಕ್ಕಳ ಅಸಹಾಯಕ ಸ್ಥಿತಿ ಕಂಡು ರೋಸಿಹೋಗಿದ್ದಳು. ಇದಕ್ಕೇನಾದರೂ ಪರಿಹಾರ ಕಂಡುಕೊಳ್ಳಲೇಬೇಕು ಎಂದು ನಿಶ್ಚಯಿಸಿದ ಬಾಸನ್ ಊರಿನ ಮಹಿಳೆಯರನ್ನು ಸಂಘಟಿತಗೊಳಿಸಿ ಅವರನ್ನು ಸಣ್ಣ ಉಳಿತಾಯಕ್ಕೆ ಪ್ರೇರೇಪಿಸಬೇಕು, ಆ ದುಡ್ಡನ್ನು ಒಂದು ಮಾಡಿ ಸ್ವಉದ್ಯೋಗ ಪ್ರಾರಂಭಿಸಬೇಕು ಎಂದು ಚಿಂತನೆ ನಡೆಸುತ್ತಿದ್ದರು. ಅದರೆ ಊರಿನ ಮಹಿಳೆಯರು ನಿರಕ್ಷರರಾಗಿದ್ದರಿಂದ ಬಾಸನ್ ಮಾತು ಅವರಿಗೆ ಅರ್ಥವಾಗುತ್ತಿರಲಿಲ್ಲ. ಆದರೆ ಆಕೆ ಬಿಡಬೇಕಲ್ಲ. ಛಲದಿಂದ ಕಾರ್ಯ ಮುಂದುವರಿಸಿದಳು. ಕೆಲಮಂದಿ ಇವಳ ಜೊತೆ ಸೇರಿಕೊಂಡರು. ಈ ಕಾರ್ಯಕ್ಕೆ ಫುಲಬಾಸನ್ ಹಾಗೂ ಇತರ ಮಹಿಳೆಯರು ಮುಂದಾದಾಗ ಕುಟುಂಬದ ಸದಸ್ಯರೇ ಅವರನ್ನು ಹೊಡೆದು ಬಡಿದು ಮನೆಯಿಂದ ಆಚೆ ಹಾಕಿದ್ದರು. ಆಗಲೂ ಧೈರ್ಯ ಕಳೆದುಕೊಳ್ಳದ ಈ ಮಹಿಳೆಯರೊಂದಿಗೆ ಪುಸಲಬಾಯ್ 5–6 ದಿನಗಳ ಕಾಲ ಮರದ ನೆರಳಿನಲ್ಲೆ ಕಳೆದು ಪ್ರತ್ಯೇಕ ಗುಡಿಸಲು ಮಾಡಿಕೊಂಡು ಇರತೊಡಗಿದರು. ತಮ್ಮ ಕಾರ್ಯ ಮುಂದುವರಿಸಿದರು. ಯಾವಾಗ ಯಶಸ್ಸು ಇವರ ಕಡೆ ವಾಲಿತೋ ಆಗ ಕುಟುಂಬದವರೂ ಬದಲಾದರು.

ಗ್ರಾಮೀಣ ಮಹಿಳೆಯರು ಕೂಲಿನಾಲಿ ಮಾಡಿ ಸಂಪಾದಿಸಿದ ಹಣದ ಒಂದಿಷ್ಟು ಭಾಗವನ್ನು ಮನೆಗಂಡಸರು ಸಾರಾಯಿಗಾಗಿ ಕಿತ್ತುಕೊಳ್ಳುತ್ತಿದ್ದರು. ಬಾಸಾಯಿ ಇದರ ವಿರುದ್ಧ ದನಿ ಎತ್ತಿದರು. ಸೂಕುಲದೈಹಾನ್ ಗ್ರಾಮದಿಂದ ಆರಂಭಿಸಿದ 'ವ್ಯಸನಮುಕ್ತಿ ಅಭಿಯಾನ'ವು ಇಂದು ರಾಜಾನಂದಗಾವ್ ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ 760 ಗ್ರಾಮಗಳಲ್ಲಿ ಯಶಸ್ವಿಯಾಗಿದೆ. ಅಲ್ಲೀಗ ಸಾರಾಯಿ, ಸಿಗರೇಟಿನ ಹಾವಳಿಯಿಂದ ಗ್ರಾಮ ಮುಕ್ತವಾಗಿದೆ. ಸತತ ಹೋರಾಟದ ಫಲವಾಗಿ ಮಹಿಳೆಯರು ಕೈಜೋಡಿಸಲಾರಂಬಿಸಿದರು.

ಸಣ್ಣ ಜೋಪಡಿಯಿಂದ ಹೊರಬಂದು ಹೆಣ್ಣಿನ ಹಕ್ಕುಗಳಿಗಾಗಿ ದನಿಯೆತ್ತಿದ ಫುಲಬಾಸನ್ ಅವರ ಹಿಂದೆ ಇಂದು ಎರಡು ಲಕ್ಷ ಮಹಿಳೆಯರ ಸಂಘಟಿತ ಶಕ್ತಿಯಿದೆ! ಮಾ ಪ್ರಜ್ಞಾ ಬಮಲೇಶ್ವರಿ ಹೆಸರಿನಲ್ಲಿ ಸರ್ಕಾರದ ನೆರವಿಲ್ಲದೆ, ಹಂಗಿಲ್ಲದೆ ತಾವೇ ಸ್ವಸಹಾಯ ಸಂಘಗಳನ್ನು ಸ್ಥಾಪಿಸತೊಡಗಿದರು. ಮೊದಲಿಗೆ 10 ಮಹಿಳೆಯರಿಂದ ತಲಾ 10 ರೂಪಾಯಿ ಸಂಗ್ರಹಿಸಿ ಸಂಘ ಆರಂಭವಾಯಿತು. ಇದರಿಂದ ಮಹಿಳೆಯರು ಸಣ್ಣ ಉಳಿತಾಯದ ಕಡೆಗೆ ಆಕರ್ಷಿತರಾದರು. ಈಗ ರಾಜಾನಂದಗಾಂವ ಜಿಲ್ಲೆಯ 1600 ಗ್ರಾಮಗಳಲ್ಲಿ 12 ಸಾವಿರ ಸ್ವಸಹಾಯ ಸಂಘಗಳು ತಲೆಎತ್ತಿದ್ದು, 35 ಕೊಟಿ ರೂಪಾಯಿಯಷ್ಟು ಹಣ ಜಮೆಯಾಗಿದೆ. ಪರಿಣಾಮ 2ಲಕ್ಷ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ!


ಈ ಉಳಿತಾಯದ ಹಣದಿಂದ ಸ್ವಉದ್ಯೋಗ ಶುರುಮಾಡಲು ಮಾ ಬಮಲೇಶ್ವರಿ ಜನಹಿತಕಾರಿ ಸಮಿತಿಯನ್ನು ಸ್ಥಾಪಿಸಲಾಯಿತು. ಮೊದಲಿಗೆ, 100 ಮಹಿಳೆಯರಿಂದ ಮಾವು ಹಾಗೂ ಲಿಂಬೆಯ ಉಪ್ಪಿನಕಾಯಿ ತಯಾರಿಕೆ ಆರಂಭವಾಯಿತು. ಇದನ್ನು 300 ಶಾಲೆಗಳಿಗೆ ಮಾರಾಟ ಮಾಡಲಾಯಿತು. ಇಷ್ಟು ಮಾತ್ರವಲ್ಲ ಅಗರಬತ್ತಿ, ಹಪ್ಪಳ, ವಾಷಿಂಗ್ ಪೌಡರ್, ಮೇಣದಬತ್ತಿ ತಯಾರಿಕೆಯೂ ಭರದಿಂದ ಸಾಗಿದ್ದು ಬಮಲೇಶ್ವರಿ ಬ್ರಾಂಡ್ ಜನರ ಮನಸ್ಸನ್ನು ಗೆದ್ದಿದೆ.

ಇಂಥ ಅನನ್ಯ ಸಂಘರ್ಷದ ಪರಿಣಾಮ 2012ರಲ್ಲಿ ಪದ್ಮಶ್ರೀ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ ಫುಲಬಾಸನ್ ಸಮಾಜ ಸೇವೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ್ದಾರೆ.

## ಪ್ರತಿ ಗ್ರಾಮದಲ್ಲೂ ಆರೆಸ್ಸೆಸ್ ಶಾಖೆ

"ಯುವಕರಲ್ಲಿ ದೇಶಭಕ್ತಿ ತುಂಬುವ ಕೆಲಸ ಸದ್ಯದ ಜರೂರತ್ತು. ಇದಕ್ಕಾಗಿ ಆರೆಸ್ಸೆಸ್ ಪ್ರಯತ್ನಶೀಲವಾಗಿದ್ದು, ದೇಶದ ಪ್ರತಿ ಗ್ರಾಮದಲ್ಲೂ ಸಂಘದ ಶಾಖೆಗಳನ್ನು ತೆರೆಯುವ ಅಗತ್ಯವಿದೆ."

– ಆರೆಸ್ಸೆಸ್ ಸರಸಂಘಚಾಲಕ **ಮೋಹನ್ ಭಾಗವತ್**, ಕಾನ್ಪುರದ ಕಾರ್ಯಕ್ರಮವೊಂದರಲ್ಲಿ.



पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALOURU/ GPO on 10/25 of every Month REG.NO.CPMG/KA/BGS/102/2015-17
1-3-2015



# ಪಾಕಿಸ್ತಾನ ಪ್ರೇಮಿ ಪಿಎಫ್ಐ: ಏಕತೆಯ ಹೆಸರಿನಲ್ಲಿ ಶಿವಮೊಗ್ಗದಲ್ಲಿ ದೊಂಬಿ, ಕೊಲೆ

ದಕ್ಷಿಣ ಭಾರತ ಅದರಲ್ಲೂ ಮುಖ್ಯವಾಗಿ ಸರ್ವಜನಾಂಗದ ಶಾಂತಿಯ ತೋಟ ಕರ್ನಾಟಕ ಜಿಹಾದಿಗಳ ನೆಚ್ಚಿನ ತಾಣವಾಗುತ್ತಿದೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಇತ್ತೀಚೆಗೆ ಫೆಬ್ರವರಿ 19ರಂದು ಶಿವಮೊಗ್ಗದಲ್ಲಿ Popular Front of India (PFI) ಎಂಬ ಸಂಘಟನೆ ರ್‍ಯಾಲಿಯೊಂದನ್ನು ಆಯೋಜಿಸಿತ್ತು. ರ್‍ಯಾಲಿಯ ನಂತರ ನಡೆದದ್ದು ಅಂಗಡಿ ಮುಂಗಟ್ಟುಗಳಿಗೆ ಬೆಂಕಿ, ಅಮಾಯಕರ ಹತ್ಯೆ ಮುಂತಾದ ಅಮಾನುಷ ಘಟನೆಗಳು. 'ಏಕತಾ ಯಾತ್ರೆ' ಎಂಬ ಹೆಸರಿನಲ್ಲಿ ಪಿಎಫ್ಐ ನಡೆಸಿದ ಈ ಯಾತ್ರೆಯಲ್ಲಿ ಮಾರಕಾಸ್ತ್ರಗಳನ್ನು ಪ್ರದರ್ಶಿಸಿದ್ದು, ಪಾಕ್ ಪರವಾದ ಘೋಷಣೆಗಳು ಹಾಗೂ ಬೇರೆಬೇರೆ ಸಂಘಟನೆಗಳ ವಿರುದ್ಧ ಘೋಷಣೆ ಕೂಗಲಾಯಿತು ಮಾತ್ರವಲ್ಲದೇ ಕೇವಲ ಹಿಂದು ಎಂಬ ಒಂದೇ ಕಾರಣಕ್ಕೆ ಶಿವಮೊಗ್ಗ ನಗರದಲ್ಲಿ ಇಬ್ಬರು ಅಮಾಯಕ ಹಿಂದುಗಳ ಹತ್ಯೆ ನಡೆಸಲಾಗಿದೆ.

ದುರ್ದೈವದ ಸಂಗತಿಯೆಂದರೆ ಹಿಂದುಗಳ ಆರೋಗ್ಯ, ಸೇವೆ ಹಾಗೂ ಸುರಕ್ಷೆ ಕಲ್ಪಸುವ ಸಲುವಾಗಿ ತಮ್ಮ ಸಂಪೂರ್ಣ ಜೀವನವನ್ನು ಅರ್ಪಿಸಿದವರನ್ನು ನಿರ್ಬಂಧಿಸುವ ಇದೇ ಸರಕಾರ ದುಷ್ಕೃತ್ಯಗಳ ಸರಮಾಲೆ ಯನ್ನೇ ಹೊಂದಿರುವ ಪಿಎಫ್ಐನ ರ್‍ಯಾಲಿಗೆ ಯಾವ ಆಧಾರದ ಮೇಲೆ ಅನುಮತಿ ನೀಡಿತು ಎಂಬುದೇ ಯಕ್ಷಪ್ರಶ್ನೆ. ಆದರೆ ಪಿಎಫ್ಐಯ ಮೇಲೆ ಈವರೆಗೆ ಯಾವುದೇ ಘಟನೆ ನಡೆಸಿದ ಬಗೆಗೆ



ದೂರು ದಾಖಲಾಗದಿರುವುದರಿಂದ ಅನುಮತಿ ನೀಡಲಾಗಿದೆ ಎನ್ನುತ್ತದೆ ನಮ್ಮ ಜಾತ್ಯತೀತ ನಿಲವಿನ ರಾಜ್ಯಸರಕಾರ. ಆದರೆ PFI ಸಂಘಟನೆಯನ್ನು ಹತ್ತಿರದಿಂದ ನೋಡಿದವರಂತೂ ಇದು ನಿಷೇಧಿತ ಉಗ್ರ ಸಂಘಟನೆಯಾದ SIMIಯ ಇನ್ನೊಂದು ರೂಪ ಎನ್ನುತ್ತಾರೆ. ಇದಕ್ಕೆ ಪೂರಕವಾಗುವಂತೆ PFI ಕುಖ್ಯಾತಿಯ ಕೆಲಸಗಳನ್ನು ಮಾಡಿದೆ.

1. ಕೇರಳದ ಎರ್ನಾಕುಳಂನಲ್ಲಿರುವ ನ್ಯೂಮನ್ ಕಾಲೇಜಿನ ಪ್ರೊಫೆಸರ್ ಟಿ.ಜೆ. ಜೋಸೆಫ್ ಎಂಬವರನ್ನು 2010ರ ಜುಲೈನಲ್ಲಿ ಧರ್ಮನಿಂದನೆ ಮಾಡಿದರೆಂಬ ಕಾರಣಕ್ಕೆ PFI ಕಾರ್ಯಕರ್ತರು ಅವರ ಕೈ ಕಡಿದರು. ಈ ದುರ್ಘಟನೆ ನಡೆದ ಬೆನ್ನಲ್ಲೆ PFI, 2010 ಆಗಸ್ಟ್ 15ರಂದು 'ಫ್ರೀಡಂ ಪರೇಡ್' ಆಯೋಜಿಸಲು ನಿರ್ಧರಿಸಿರುವುದನ್ನು ತಿಳಿದ ಅಂದಿನ ಮಂತ್ರಿ ಎಂ.ಎ. ಬೇಬಿ ಛೀಮಾರಿ ಹಾಕಿ, ಆ ಪರೇಡನ್ನು ನಿಷೇಧಿಸಿ ಆದೇಶ ಹೊರಡಿಸುತ್ತಾರೆ. ಇಷ್ಟುಮಾತ್ರವಲ್ಲದೇ PFI ಸಂಘಟನೆಯನ್ನು ನಿಷೇಧಿಸುವ ಕುರಿತು ಕೇರಳ ಹೈಕೋರ್ಟ್ ಅಂದಿನ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಕೇಳಿ ನೋಟಿಸ್ ಕೂಡಾ ಜಾರಿ ಮಾಡಿತ್ತು.
2. ವಿಶ್ವಾಸಾರ್ಹ ಮೂಲಗಳಿಂದ ಬಂದ ಮಾಹಿತಿಯ ಮೇರೆಗೆ ಕೇರಳ ಪೋಲಿಸ್ 2013 ಜುಲೈ 2ರಂದು PFI ಗೆ ಸೇರಿದ ಗುಪ್ತಸ್ಥಳವೊಂದರ ಮೇಲೆ ದಾಳಿ ನಡೆಸಲಾಗುತ್ತದೆ. ಅಲ್ಲಿನ ದೃಶ್ಯ ಕಂಡು ಪೋಲಿಸರು ಧಂಗಾಗಿ ಹೋಗುತ್ತಾರೆ. ನಕಲಿ ಮಾನವನ ಆಕೃತಿ (ಶೂಟಿಂಗ್ ತರಬೇತಿಗಾಗಿ), ಕತ್ತಿಗಳು, ದೇಸಿ ಬಾಂಬುಗಳು, ಗನ್ ಪೌಡರ್‌ಗಳನ್ನು ವಶಪಡಿಸಿಕೊಳ್ಳುವುದರ ಜೊತೆ PFI ನ 21 ಕಾರ್ಯಕರ್ತರನ್ನೂ ರೆಡ್‌ಹ್ಯಾಂಡ್ ಆಗಿ ಬಂಧಿಸಲಾಗಿದೆ. ಇದು ಸಾಲದೆಂಬಂತೆ PFI ದೇಶದ್ರೋಹಿ ಶಸ್ತ್ರಾಸ್ತ್ರ ತರಬೇತಿ ಶಿಬಿರಗಳನ್ನು (Arms Training Camp) ನಡೆಸುತ್ತಿದೆಯೆಂದು ಕೇಂದ್ರ ತನಿಖಾ ದಳ (NIA) ಚಾರ್ಜ್‌ಶೀಟ್ ಸಹ ಸಲ್ಲಿಸುತ್ತದೆ.
3. 2014 ಫೆ 14 ರಂದು ಕೇರಳ ಸರ್ಕಾರ ಪಿಎಫ್ಐಗೆ ಸಂಬಂಧಿಸಿದ ಮಾಹಿತಿಯಿರುವ ಅಫಿದವಿತ್‌ನ್ನು ರಾಜ್ಯ ಹೈಕೋರ್ಟಿಗೆ ಸಲ್ಲಿಸಿದೆ. ಈ ಸರ್ಕಾರಿ ಅಫಿಡೆವಿಟ್ಟಿನ ಪ್ರಕಾರ PFI ಮೇಲೆ 27 ಕೋಮು ಪ್ರಚೋದಿತ ಕೊಲೆ ಪ್ರಕರಣಗಳು, 86 ಕೊಲೆ ಪ್ರಯತ್ನ ಪ್ರಕರಣಗಳು ಹಾಗೂ 106 ಕೋಮು ಹಿಂಸಾಚಾರ ಪ್ರಕರಣಗಳು ದಾಖಲಾಗಿವೆ.
4. ಕಳೆದ ವರ್ಷ ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯ ಸಂಧರ್ಭದಲ್ಲಿ PFI ನ ರಾಜಕೀಯ ಮುಖವಾಡವಾದ SDPI ನ ಕಾರ್ಯದರ್ಶಿ ಸಯ್ಯದ್ ಬರ್ಕತುಲ್ಲಾ ಬಾಷಾನನ್ನು ಹವಾಲ (Money Laundering) ಪ್ರಕರಣದಲ್ಲಿ ಪೋಲಿಸರು ಬಂಧಿಸಿದ್ದಾರೆ. ಆರೋಪಿಗೆ ಸಜೆಯೂ ಆಗಿದೆ.
5. 2014ರ ಸ್ವಾತಂತ್ರ್ಯ ದಿನಾಚರಣೆಯಂದು ಕೇರಳದ ಕೊಲ್ಲಂ ಪ್ರದೇಶದಲ್ಲಿರುವ ಟಿ.ಕೆ.ಎಂ ಸೆಂಟಿನರಿ ಶಾಲೆಯಲ್ಲಿ 'ವಂದೇ ಮಾತರಂ' ಹಾಡಲು ಅಡ್ಡಿಪಡಿಸಿದ್ದು ಸಹ ಇದೇ PFI !

ಇಷ್ಟೆಲ್ಲಾ ದೇಶದ್ರೋಹಿ ಕೆಲಸಗಳನ್ನು ಮಾಡಿದ್ದರೂ ಸಹ ಪಿಎಫ್ಐಗೆ ರ್‍ಯಾಲಿಗೆ ರಾಜ್ಯ ಸರಕಾರ ಅನುಮತಿ ನೀಡುತ್ತದೆ. ನಡೆಸಿದ ಭೀಭತ್ಸ ಅಕ್ರಮಗಳ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡಿತ್ತು. ಆದರೂ ಪೊಲೀಸರು ಮೌನಕ್ಕೆ ಶರಣಾಗಿದ್ದಾರೆ!

ಮಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿಯಲ್ಲೂ ಇವರು ಬೇರೂರುತ್ತಿದ್ದಾರೆ, ಹುಷಾರ್!

### ಜಮೇತ್ ಉಲೇಮಾ ಮುಫ್ತಿ ಮುಹಮ್ಮದ್
## ಶಿವನೇ ಮುಸ್ಲಿಂರ ಮೊದಲ ಪ್ರವಾದಿ

ಭಗವಾನ್ ಶಿವ ಮುಸ್ಲಿಮರ ಮೊದಲ ಪ್ರವಾದಿ. ಶಿವ ಮತ್ತು ಪಾರ್ವತಿ ಹಿಂದೂಗಳ ಆರಾಧ್ಯ ದೈವವಾಗಿರುವಂತೆ ಮುಸ್ಲಿಮರ ಮೂಲ ಪುರುಷರೂ ಹೌದು ಎಂದು ಉತ್ತರ ಪ್ರದೇಶದ ಜಮಾತ್ ಉಲ್ ಉಲೆಮಾದ ಮುಸ್ಲಿಂ ಧಾರ್ಮಿಕ ಮುಖಂಡ ಮುಫ್ತಿ ಮುಹಮ್ಮದ್ ಇಲಿಯಾಸ್ ಹೇಳಿದ್ದಾರೆ.

ಮುಸ್ಲಿಂ ಧರ್ಮ ಹುಟ್ಟಿದ್ದು ಕೂಡ ಭಾರತದಲ್ಲಿಯೇ. ಶಿವ ಮೊದಲ ಪ್ರವಾದಿಯಾದ್ದರಿಂದ ಮುಸ್ಲಿಮರು ಕೂಡ ಸನಾತನ ಧರ್ಮದ ಅನುಯಾಯಿಗಳು. ಹಿಂದೂ ರಾಷ್ಟ್ರದ ಪರಿಕಲ್ಪನೆಗೆ ಮುಸ್ಲಿಮರ ಆಕ್ಷೇಪವಿಲ್ಲ. ನಾವೆಲ್ಲ ಹಿಂದೂಸ್ತಾನಕ್ಕೆ ಸೇರಿದವರು. ಈ ಮಣ್ಣಿನ ಮಕ್ಕಳು. ನಾವೆಲ್ಲ ಒಂದೇ ಧರ್ಮಕ್ಕೆ ಸೇರಿದವರು. ಭಾರತದಲ್ಲಿರುವ ಮುಸ್ಲಿಮರು ಯಾವುದೇ ಕಾರಣಕ್ಕೂ ಭಯೋತ್ಪಾದನೆಯನ್ನು ಸಹಿಸುವುದಿಲ್ಲ' ಎಂದ ಅವರು, ಕೋಮುಶಕ್ತಿಗಳಿಗೆ ಈ ದೇಶದಲ್ಲಿ ಸ್ಥಾನವಿಲ್ಲ. ದೇಶಕ್ಕೆ ಸದ್ಯ ಅಗತ್ಯವಿರುವುದು ಕೋಮುಸಾಮರಸ್ಯ ಎಂದು ಪ್ರತಿಪಾದಿಸಿದರು.

**ಇಲಿಯಾಸ್ ಹೇಳಿದ್ದೇನು?**
- ಶಿವ, ಪಾರ್ವತಿ ಮುಸ್ಲಿಮರ ಮೂಲ ಪುರುಷರು
- ಮುಸ್ಲಿಂ ಧರ್ಮ ಹುಟ್ಟಿದ್ದು ಭಾರತದಲ್ಲಿ
- ಮುಸ್ಲಿಮರೂ ಸನಾತನ ಧರ್ಮದ ಅನುಯಾಯಿಗಳು
- ಹಿಂದೂ ರಾಷ್ಟ್ರದ ಪರಿಕಲ್ಪನೆಗೆ ಮುಸ್ಲಿಮರ ಆಕ್ಷೇಪವಿಲ್ಲ
- ಭಾರತದ ಮುಸ್ಲಿಮರು ಭಯೋತ್ಪಾದನೆಯನ್ನು ಸಹಿಸರು

ಉತ್ತರ ಪ್ರದೇಶದ ಬಲರಾಮಪುರದಲ್ಲಿ ಇದೇ 27ರಂದು ಜಮಾತ್ ಉಲ್ ಉಲೇಮಾ ಆಯೋಜಿಸಿರುವ ಸರ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಅಯೋಧ್ಯೆಯ ಹಿಂದೂ ಸಾಧುಸಂತರಿಗೆ ಆಹ್ವಾನ ನೀಡಿ ಈ ಹೇಳಿಕೆ ನೀಡಿದ್ದಾರೆ. ತದನಂತರ ಜಮಾತ್ ನಿಯೋಗದ ಸದಸ್ಯರು ಹಾಗೂ ಸಾಧು-ಸಂತರು ಒಟ್ಟಾಗಿ ಭಯೋತ್ಪಾದನೆಯ ಪ್ರತಿಕೃತಿಯನ್ನು ದಹಿಸಿದರು. ಉತ್ತರ ಪ್ರದೇಶದ ಬಲರಾಮಪುರದಲ್ಲಿ ಫೆ.27ರಂದು ನಡೆಯಲಿರುವ ಕೋಮು ಸೌಹಾರ್ದ ಸಮಾವೇಶದಲ್ಲಿ ಎಲ್ಲಾ ಧರ್ಮಗಳ ಪ್ರತಿನಿಧಿಗಳು ಪಾಲ್ಗೊಂಡು ಕೋಮುಸೌಹಾರ್ದ ಸಂದೇಶ ಸಾರಲಿದ್ದಾರೆ.

## ದ್ವಿಪತ್ನಿತ್ವ ಧಾರ್ಮಿಕ ಹಕ್ಕು ಅಲ್ಲ : ಸುಪ್ರೀಂ ಕೋರ್ಟ್



ಮುಸಲ್ಮಾನ ವ್ಯಕ್ತಿಗೆ ಇಸ್ಲಾಂ ಧರ್ಮ ಪಾಲಿಸಲು ಇರುವ ಮೂಲಭೂತ ಹಕ್ಕಿನ ವ್ಯಾಪ್ತಿಗೆ ದ್ವಿಪತ್ನಿತ್ವ/ಬಹುಪತ್ನಿತ್ವ ಒಳಪಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಸಂವಿಧಾನದ 25ನೇ ವಿಧಿಯು ಧಾರ್ಮಿಕ ನಂಬಿಕೆಗೆ ರಕ್ಷಣೆ ನೀಡುತ್ತದೆಯೇ ವಿನಾ ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ ಅಥವಾ ನೈತಿಕತೆಗೆ ವಿರುದ್ಧವಾದ ಯಾವುದೇ ಆಚರಣೆಗೆ ರಕ್ಷಣೆ ನೀಡುವುದಿಲ್ಲ. ಬಹುಪತ್ನಿತ್ವವು ಯಾವುದೇ ಧರ್ಮದ ಅವಿಭಾಜ್ಯ ಅಂಗವಲ್ಲ. ಏಕಪತ್ನಿತ್ವವು ಸಂವಿಧಾನದ 25ನೇ ವಿಧಿಯಡಿ ರಾಜ್ಯಗಳಿಗೆ ದತ್ತವಾಗಿರುವ ಅಧಿಕಾರದಡಿ ಸುಧಾರಿತ ವ್ಯವಸ್ಥೆಯಾಗಿದೆ. ಬಹುಪತ್ನಿತ್ವಕ್ಕೆ ಧರ್ಮದಲ್ಲಿ ಅವಕಾಶವಿದೆ ಎಂದ ಮಾತ್ರಕ್ಕೆ ಅದಕ್ಕೆ ಸಂಪೂರ್ಣ ಧಾರ್ಮಿಕ ಸಮ್ಮತಿ ಇದೆ ಎಂದು ಅರ್ಥವಲ್ಲ ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಟಿ.ಎಸ್. ಠಾಕೂರ್ ಹಾಗೂ ಎ.ಕೆ. ಗೋಯಲ್ ಅವರನ್ನೊಳಗೊಂಡ ದ್ವಿಸದಸ್ಯಪೀಠ ತೀರ್ಪು ನೀಡಿದೆ.

ಉತ್ತರ ಪ್ರದೇಶ ಸರ್ಕಾರದ ನೀರಾವರಿ ಇಲಾಖೆ ಮೇಲ್ವಿಚಾರಕನಾಗಿದ್ದ ಖುರ್ಷೀದ್ ಅಹಮ್ಮದ್ ಖಾನ್ ಎಂಬಾತ ಮೊದಲನೇ ಮದುವೆ ಇನ್ನೂ ಅಸ್ತಿತ್ವದಲ್ಲಿದ್ದಾಗಲೇ ಅನುಮತಿ ಪಡೆಯದೇ ಎರಡನೇ ಮದುವೆಯಾಗಿದ್ದ. ಈ ಸಂಬಂಧ ಮೊದಲನೇ ಪತ್ನಿಯ ಸಹೋದರಿ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ನೀಡಿದ್ದ ದೂರಿನ ಅನ್ವಯ, ಪೊಲೀಸರಿಗೆ ತನಿಖೆ ನಡೆಸಲು ಸೂಚಿಸಲಾಗಿತ್ತು. ತನಿಖೆಯ ನಂತರ, ಇದನ್ನು ದುರ್ವರ್ತನೆ ಎಂದು ಪರಿಗಣಿಸಿದ್ದ ಉತ್ತರ ಪ್ರದೇಶ ಸರ್ಕಾರವು ಆತನನ್ನು ನೌಕರಿಯಿಂದ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅಹಮ್ಮದ್ ಖಾನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಉತ್ತರ ಪ್ರದೇಶ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದಿದೆ. ಈ ಹಿಂದೆ ಬಾಂಬೆ, ಗುಜರಾತ್ ಮತ್ತು ಅಲಹಾಬಾದ್ ಹೈಕೋರ್ಟ್‌ಗಳು ಕೂಡ ಇದೇ ರೀತಿಯ ತೀರ್ಪುಗಳನ್ನು ಪ್ರಕಟಿಸಿವೆ ಎಂಬುದನ್ನು ನ್ಯಾಯಪೀಠ ಈ ಸಂದರ್ಭದಲ್ಲಿ ಉಲ್ಲೇಖಿಸಿತು. ಉತ್ತರ ಪ್ರದೇಶ ಸರ್ಕಾರವು ದ್ವಿಪತ್ನಿತ್ವ/ಬಹುಪತ್ನಿತ್ವಕ್ಕೆ ಸಂಬಂಧಿಸಿದಂತೆ ರೂಪಿಸಿರುವ ಸರ್ಕಾರಿ ನೌಕರರ ವರ್ತನೆ ನಿಯಮವನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಈ ನಿಯಮವು ಸಂವಿಧಾನದ 25ನೇ ವಿಧಿಯನ್ನು ಉಲ್ಲಂಘಿಸುವುದಿಲ್ಲ ಎಂದು ಪೀಠ ಹೇಳಿದೆ.

(ಕೃಪೆ: ಪ್ರಜಾವಾಣಿ)

ಸದ್ದಿಲ್ಲದ ಸಾಧಕರು

## ಬಂದೂಕಿನ ಬದುಕಿಗೆ ಅಂಜದ ಅಂಜನಾ ಬದುರಿಯಾ



ಹುಡುಗಿಯರು ಸಾಮಾನ್ಯವಾಗಿ ಮನೆ ಬಿಟ್ಟು ಓಡಿ ಹೋಗಲು ಬಲವಾದ ಎರಡು ಕಾರಣಗಳಿರುತ್ತವೆ. ಒಂದು ಪ್ರೇಮ ವಿವಾಹ, ಮತ್ತೊಂದು ಕೌಟುಂಬಿಕ ಸಮಸ್ಯೆ ಎಂದು ಸಮಾಜಶಾಸ್ತ್ರಜ್ಞರು ಗುರುತಿಸಿದ್ದಾರೆ. ಆದರೆ ತಾನು ಇಷ್ಟಪಟ್ಟ ಕೆಲಸಕ್ಕೆ ಸೇರಿಕೊಳ್ಳುವ ಸಲುವಾಗಿ ಮನೆಯವರ ವಿರೋಧ ಕಟ್ಟಿಕೊಂಡು ಮನೆ ಬಿಟ್ಟು ಓಡಿ ಹೋಗಿ ಬದುಕು ಕಟ್ಟಿಕೊಂಡ ಯುವತಿ ಅಂಜನಾ ಬದುರಿಯಾ ಅವರ ಕಥೆ ಇದು. ಅಂಜನಾ ಮೂಲತಃ ಹರಿಯಾಣ ರಾಜ್ಯದವರು. ಅಪ್ಪ ಭಾರತೀಯ ವಾಯುಪಡೆಯಲ್ಲಿ ಕೆಲಸ ಮಾಡುತ್ತಿದ್ದರು. ಹಾಗಾಗಿ ಅಂಜನಾಗೆ ಭಾರತೀಯ ಸೇನೆ ಅಂದರೆ ಅಚ್ಚುಮೆಚ್ಚು. ಸೇನೆಯಲ್ಲಿ ಯೋಧರಂತೆ ಬಂದೂಕು ಹಿಡಿದು ಶತ್ರುಗಳನ್ನು ಸದೆಬಡಿಯುವ ಕನಸು ಅಂಜನಾ ಅವರಿಗಿತ್ತು. ಆದರೆ ಭಾರತೀಯ ಸೇನೆಯಲ್ಲಿ ಮಹಿಳಾ ಯೋಧರ ನೇಮಕಾತಿ ಇರಲಿಲ್ಲ. ಮೈಕ್ರೊಬಯಾಲಜಿಯಲ್ಲಿ ಪದವಿ ಪಡೆದು ಮನೆಯಲ್ಲಿ ಕುಳಿತಿದ್ದ ಅಂಜನಾಗೆ ಭಾರತ ಸರ್ಕಾರ ಒಂದು ಸಿಹಿ ಸುದ್ದಿಯನ್ನು ನೀಡಿತ್ತು. ಮೊಟ್ಟ ಮೊದಲ ಬಾರಿಗೆ ಮಹಿಳಾ ಸೈನಿಕರ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಇದು ಪ್ರಯೋಗಾತ್ಮಕ ನೇಮಕಾತಿಯಾದ್ದರಿಂದ 25 ಯುವತಿಯರಿಗೆ ಮಾತ್ರ ಅವಕಾಶವಿತ್ತು. ಅಂಜನಾ ಮನೆಯಲ್ಲಿ ತಿಳಿಸದೆ ಅರ್ಜಿ ಹಾಕಿದ್ದರು. ನೇಮಕಾತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆಯಾದರು. ಮನೆಯಲ್ಲಿ ಸೇನೆಗೆ ಸೇರುವುದಾಗಿ ಹೇಳಿದರು. ಅಮ್ಮ ಒಪ್ಪಿಗೆ ನೀಡಿದರೂ ಅಣ್ಣ ಮಾತ್ರ ಸುತರಾಂ ಒಪ್ಪಲಿಲ್ಲ. ಕೊನೆಗೆ ಒಂದು ರಾತ್ರಿ ಮನೆ ಬಿಟ್ಟು ಚೆನ್ನೈ ರೈಲು ಹತ್ತಿದ್ದರು. ಎರಡು ವರ್ಷ ಯಶಸ್ವಿಯಾಗಿ ತರಬೇತಿ ಮುಗಿಸಿದರು. ಎಲ್ಲಾ ವಿಭಾಗಗಳಲ್ಲೂ ಅತ್ಯುತ್ತಮ ಪ್ರದರ್ಶನ ನೀಡಿದ್ದರಿಂದ ಅಂಜನಾಗೆ ರಾಷ್ಟ್ರಪತಿಗಳು ಚಿನ್ನದ ಪದಕ ನೀಡಿ ಗೌರವಿಸಿದರು. ಸೇನೆಯಲ್ಲಿ ಬಂಗಾರದ ಪದಕ ಪಡೆದ ದೇಶದ ಮೊಟ್ಟ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಅಂಜನಾ ಪಾತ್ರರಾಗಿದ್ದಾರೆ. ಅಂಜನಾ ಕಾಶ್ಮೀರ ಮಹಿಳಾ ಬೆಟಾಲಿಯನ್ನಲ್ಲಿ ಕೆಲಸ ಮಾಡುತ್ತಿದ್ದಾರೆ. ಭಾರತೀಯ ಸೇನೆಯಲ್ಲಿ ಮಹಿಳೆಯರು ನರ್ಸ್ ಹಾಗೂ ವೈದ್ಯರಾಗಿ ಮಾತ್ರ ಕೆಲಸ ಮಾಡುತ್ತಿದ್ದರು. ಇದೀಗ ಬಂದೂಕು ಹಿಡಿದು ಯುದ್ಧ ಮಾಡುವಂತಹ ಅವಕಾಶಗಳು ಲಭ್ಯವಿವೆ. ಇದನ್ನು ಯುವತಿಯರು ಸದುಪಯೋಗಪಡಿಸಿಕೊಳ್ಳಬೇಕು ಎನ್ನುತ್ತಾರೆ ಅಂಜನಾ.

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19